REGISTERED No. BGW - 180

Printed by V.R NATH for the Publisher M. SHIVAKUMAR, Published and owned by M SHIVA KUMAR, 36, 6th Main Road, Malleswaram, Bangalore - 560 003 Printed at IMPRESSIONS, 404, Sampige Road, Malleswaram, Bangalore - 560 003 Editor M SHIVA KUMAR

ಅಪರಂಜಿ

ಮೇ
1992
ತಿಳಿನಗೆಯ ಕಾರಂಜಿ



* ಪ್ರಕಾಶ್
* ಸಿ. ವಿ. ವೇಣುಗೋಪಾಲ
* ಹಾ. ಮ್ಯಾ. ಸೂರಿ
* ಅ. ರಾ. ಸೇ.
* ಶಿವು
* ಡಾ॥ ಪ್ರಕಾಶ್
* ಆರತಿ
* ಡಾ. ಎಚ್. ಕೆ. ರಂಗನಾಥ್
* ಮ. ಶ್ರೀ. ಮುರಳೀಕೃಷ್ಣ
* ದಾಶರಥಿ ದೀಕ್ಷಿತ್
* ಶಾಂತಾರಘು

ಬಿಡಿ ಪ್ರತಿ : 2 ರೂ. 50 ಪೈ.



ಸಂಪುಟ ೯ ಮೇ ೧೯೯೨ ಸಂಚಿಕೆ ೮

ಗೌರವ ಸಲಹೆಗಾರರು :
ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ

ಸಂಪಾದಕ :
ಶಿವಕುಮಾರ್

ಚಂದಾ ವಿವರ :
ಬಿಡಿ ಪ್ರತಿ
2 ರೂ. 50 ಪೈ.
ವಾರ್ಷಿಕ ಚಂದಾ
25 ರೂ.
ಆಜೀವ ಚಂದಾ
250 ರೂ.

ವಿಳಾಸ
ಅಪರಂಜಿ ಕಾರ್ಯಾಲಯ
36, 6ನೆಯ ಮುಖ್ಯ ರಸ್ತೆ
ಮಲ್ಲೇಶ್ವರಂ
ಬೆಂಗಳೂರು 560 003

ಕೆಲಸದ ವೇಳೆ :
ಬೆಳಗ್ಗೆ 8ರಿಂದ
10 ಗಂಟೆಯವರೆಗೆ

ಹೊಸ ಸಂಸಾರ ಹೂಡಿದ ವಿದ್ಯಾ, ಗಂಡ ಮನೆಗೆ ಬಂದ ಕೂಡಲೇ "ಬಾ ಪ್ರಿಯಾ, ಪ್ರಶಾಂತ ಹೃದಯಾ" ಎಂದು ಪಲುಕುತ್ತಾ ಇದಿರುಗೊಂಡು "ಇವತ್ತು ನೋಡಿ ಪ್ರಿಯಾ, ಪುಸ್ತಕದಲ್ಲಿ ಹೇಳಿದ ಹಾಗೆ, ಉಪ್ಪಿಟ್ಟು ಮಾಡಿದೆ. ನಿಮಗೇ ಅಂತ ಮಾಡಿದೆ. ಆದರೆ ಅಂಗಡಿಯವನು ಎಂಥದೋ ಉಪ್ಪು ಕಳಿಸಿದ್ದ ಅಂತ ಕಾಣುತ್ತೆ. ಹಿಟ್ಟು ಹಿಟ್ಟಾಗಿ ಬಿಟ್ಟಿದೆ" ಅಂತ ಉದ್ಗಾರ ತೆಗೆದಳು.

"ಅಂಗಡಿಯವನು ಹೀಗೆ ದ್ರೋಹ ಮಾಡ ಬಹುದು ಅಂತ ನನಗೂ ಅನುಮಾನ ಬಂದಿತ್ತು ಡಾರ್ಲಿಂಗ್ ಅದಕ್ಕೆ ಫಲಹಾರ ದರ್ಶಿನಿಯಿಂದ ಮೂರು ಖಾರಾ ಭಾತ್ ಕಟ್ಟಿಸಿಕೊಂಡು ಬಂದಿ ದೀನಿ" ಅಂತ ಪಲ್ಲವಿ ಹಾಡಿದ ಹೊಸ ಗಂಡ.

ಈ ಸಂಚಿಕೆಯಲ್ಲಿ

ಮುದ್ರಣ : ಇಂಪ್ರೆಷನ್ಸ್, ಮಲ್ಲೇಶ್ವರಂ, ಬೆಂಗಳೂರು

ದೂರವಾಣಿ ; 342144

ಅಪರಂಜಿ

(ತಿಳಿನಗೆಯ ಕಾರಂಜಿ)


ಸಂಪುಟ ೯ ಮೇ ೧೯೯೨ ಸಂಚಿಕೆ ೮

ನಾತಿ ಚಿರೇಣ ವಿಶೇಷಾತ್

—ಬ್ರಹ್ಮಸೂತ್ರಗಳು

ಅಗ್ನಿಹೋತ್ರ ಮಾಡುವವನು, ಪರೋಪಕಾರ ಮಾಡುವವನು ತಮ್ಮ ಪುಣ್ಯವು ತೀರಲು, ಭೂಮಿಗೆ ಪಾಪಶೇಷವನ್ನನುಭವಿಸಲು ಬಹುಬೇಗ ಇಳಿಯುತ್ತಾರೆ ಎಂದು ಬಾದರಾಯಣರು ಹೇಳುತ್ತಾರೆ. ಜೀವನ್ಮುಕ್ತನಿಗೆ ಮಾತ್ರ ಪ್ರಾಣವು ಉತ್ಕ್ರಮಿಸುವುದಿಲ್ಲ.

ಲೋಕದಲ್ಲೂ ಹಾಗೆ, ಇಷ್ಟಪಡುವ ಜನರಿಗೆ ತಾತ್ಕಾಲಿಕ ಆಮಿಷಗಳನ್ನು ಪೂರೈಸಿ ಮೇಲಕ್ಕೇಳುವವನು, ಬಹುಬೇಗ ಇಳಿಯುತ್ತಾನೆ. ಜೀವನ್ಮುಕ್ತನಾಗಲು ಬಯಸುವವನು ಏರುವುದಕ್ಕೇ ಹೋಗುವುದಿಲ್ಲ.



ಪ್ರಕಾಶ್

ವಿದೇಶಾಂಗ ಸಚಿವರ ರಾಜೀನಾಮೆ

— ಸುದ್ದಿ

ಬೋಫರ್ಸ್ ಗನ್ನುಗಳು ಇನ್ನೂ ಹೊಗೆಯಾಡುತ್ತಿವೆ!

*　　　*　　　*

ಬಡತನದ ಬಗ್ಗೆ ನಿರ್ಧಾರಕ್ಕೆ ತಜ್ಞರ ಸಮಿತಿ

— ಪತ್ರಿಕೆ

ತಜ್ಞರು ಬಡತನದ ರೇಖೆಯ ಕೆಳಗೇ ತೂರುತ್ತಾರೇನು ?

*　　　*　　　*

ಇಂದಿನ ಸಮಾಜಕ್ಕೆ ಧಾರ್ಮಿಕ ಧಾರೆಯ ಆಗತ್ಯವಿದೆ

— ಮುಖ್ಯಮಂತ್ರಿಗಳು

ಅನುಭವದ ಮಾತು !

*　　　*　　　*

ಗೋಕರ್ಣದ ಹಿಪ್ಪಿಗಳನ್ನು ಓಡಿಸಲು ಕರೆ

— ಪತ್ರಿಕೆ

ಗೋ ಅಂದರಾಯಿತು !

*　　　*　　　*

ವೀರಪ್ಪನ್ ಪತ್ತೆ ಕಾರ್ಯ ಖಾಸಗಿಯವರಿಗಿಲ್ಲ

— ಸುದ್ದಿ

ಸುದ್ದಿ ಕೇಳಿ ವೀರಪ್ಪನ್ ಪ್ರಸನ್ನನಾದನಂತೆ !

*   *   *

ಕಾವೇರಿ ತೀರ್ಪು, ವ್ಯಾಪಕ ಚರ್ಚೆ

— ಸುದ್ದಿ

ಚರ್ಚೆಯ ಸುಳಿ, ನೀರಿನ ವೇಗಕ್ಕಿಂತ ಹೆಚ್ಚು ಅಪಾಯಕಾರಿ !

*   *   *

'ಋ' ಅಕ್ಷರ ಬೇಕೆ ಬೇಡವೆ ಎಂದು ವಿವಾದ

— ಸುದ್ದಿ

ಅದಿತ್ತೆ ? ಅಂತ ನಮ್ಮ ಸೋಮಾರಿ ಸೀನು ಆಶ್ಚರ್ಯಪಟ್ಟನಂತೆ !

*   *   *

ಹೆಚ್ಚುತ್ತಿರುವ ಹೃದ್ರೋಗ; ವೈದ್ಯರ ಆತಂಕ

— ಪತ್ರಿಕೆ

ವೈದ್ಯರಿಗೇಕೆ ಆತಂಕ ?!

*   *   *

ಬೆಂಗಳೂರು ಯದ್ವಾ ತದ್ವಾ ಬೆಳೆಯುತ್ತಿದೆ

— ಪೂಜ್ಯ ಮೇಯರ್

ಇದರ ಬಗ್ಗೆ ಅಧ್ಯಯನಕ್ಕೆ ಯೂರೋಪಿಗೆ ಹೋಗಲೇ ಬೇಕು !

*   *   *

ಬ್ರಿಟನ್ನಿನಲ್ಲಿ ಜಾನ್ ಮೇಜರ್‌ಗೆ ಜಯ !

— ಚುನಾವಣಾ ಸುದ್ದಿ

ಇದುವರೆಗೂ ಮೈನರ್ ಆಗಿದ್ದರು ಪಾಪ !

*   *   *

ಬಿ. ಡಿ. ಎ. ಅಧಿಕಾರಿಗಳು ಲೋಕಾಯುಕ್ತ ಬಲೆಗೆ

— ಸುದ್ದಿ

ಅವರು ತಮ್ಮ ಅಭಿವೃದ್ಧಿಯಲ್ಲೇ ಆಸಕ್ತರಾಗಿದ್ದರಂತೆ !

ಮೇರಾ ಭಾರತ್ ಮಹಾನ್!

ಸಿ. ವಿ. ವೇಣುಗೋಪಾಲ

ನಮ್ಮ ಮನೆ ಇರುವುದು ರೇಸ್‌ಕೋರ್ಸಿನ ಹತ್ತಿರದ ಮಾಧವನಗರದಲ್ಲಿ ಒಮ್ಮೆ ಮನೆಯಿಂದ ಬೆಳಿಗ್ಗೆ ಹೊರಗೆ ಬಂದಾಗ ಕಣ್ಣಿಗೆ ಬಿದ್ದದ್ದು ರಸ್ತೆಯ ಮಧ್ಯೆ ಸತ್ತು ಬಿದ್ದಿದ್ದ ಒಂದು ಹೆಗ್ಗಣ. ಹತ್ತಿರವೇ ಇದ್ದ ಒಂದು ಅಂಗಡಿಗೆ ಹೋಗಿ ಅಲ್ಲಿಂದ ಕಾರ್ಪೊರೇಶನ್ನಿನ ಆರೋಗ್ಯ ಇಲಾಖೆಗೆ ಫೋನ್ ಮಾಡಿ ವಿಷಯ ತಿಳಿಸಿದೆ. ರಸ್ತೆ ನಂಬರು, ಹೆಗ್ಗಣ ಬಿದ್ದಿದ್ದ ಜಾಗದ ಬಗ್ಗೆ ವಿವರ ಕೇಳಿದವರೇ ಒಳ್ಳೆಯದು, ಅದನ್ನು ತೆಗೆಸಿ ಹಾಕುತ್ತೇವೆ ಎಂದರು. ಆಗ ಬೆಳಿಗ್ಗೆ ಸುಮಾರು ಒಂಭತ್ತೂವರೆ. ಹನ್ನೊಂದಕ್ಕೆ ನಾನು ಕಾಲೇಜಿಗೆ ಹೋಗುವ ಮೊದಲೇ ರಸ್ತೆಯಿಂದ ಹೆಗ್ಗಣ ಮಾಯವಾಗಿತ್ತು!

ಇದಾದ ಕೆಲವೇ ದಿನಗಳ ನಂತರ ನಮ್ಮ ಮನೆಯ ಮುಂದಿನ ಕಂಬದ ಲೈಟ್ ಹತ್ತದೆ ಸುತ್ತಲೂ ಕತ್ತಲಾಗಿತ್ತು. ಪಕ್ಕದಲ್ಲಿಯೇ ಒಂದು ಹಳ್ಳ ಇದ್ದು, ದಾರಿ ಗೊತ್ತಿಲ್ಲದ ಯಾರಾದರೂ ಆ ಕಡೆ ಬಂದರೆ ಕತ್ತಲಲ್ಲಿ ಅಲ್ಲಿ ಬೀಳಬಹುದಾಗಿತ್ತು. ಮಾರನೇ ದಿನ ಕಾಲೇಜಿಗೆ ಹೋಗುವಾಗ ದಾರಿಯಲ್ಲಿದ್ದ ಪೋಸ್ಟ್ ಆಫೀಸಿನಿಂದ ಮತ್ತೆ ಕಾರ್ಪೊರೇಶನ್ನಿಗೆ ಸಂಬಂಧಪಟ್ಟ ಇಲಾಖೆಗೆ ಫೋನ್ ಮಾಡಿದೆ. ಕಂಬವಿರುವ ಜಾಗದ ವಿವರಗಳನ್ನು ಕೇಳಿಕೊಂಡರು. ಅದೇ ಸಂಜೆ ಆರು ಗಂಟೆ ಹೊತ್ತಿಗೆ ಹೊಸ ಬಲ್ಬು ಬಂದಿತ್ತು. ಸುತ್ತಲೂ ಬೆಳಕು ತಂದಿತ್ತು!

ಅದೊಂದು ಶನಿವಾರ ಕಾಲೇಜಿನಿಂದ ಸುಮಾರು ನಾಲ್ಕು ಗಂಟೆಗೇ ಹಿಂತಿರುಗಿದೆ. ಬಾಗಿಲಲ್ಲೇ ನಿಂತಿದ್ದ ನನ್ನ ತಂಗಿ 'ಅಣ್ಣಾ ಎಲೆಕ್ಟ್ರಿಸಿಟಿ ಡಿಪಾರ್ಟ್‌ಮೆಂಟ್‌ನವರು ಬಂದು fuse ತೆಗೆದುಕೊಂಡು ಹೋದರು. ಈ ತಿಂಗಳ ಬಿಲ್ ಕಟ್ಟಿಲ್ಲವಂತೆ' ಎಂದಳು. ಎದೆ ಹೊಡೆದುಕೊಂಡಿತು. ಬಿಲ್ ಕಟ್ಟುವುದನ್ನು ಹೇಗೆ ಮರೆತಿದ್ದೆನೋ ಮರೆತಿದ್ದೆ. ತಮ್ಮನ ಇಂಜಿನಿಯರಿಂಗ್ ಪರೀಕ್ಷೆ ನಡೆದಿತ್ತು. ಇನ್ನು ಸೋಮವಾರ ಲೈಟ್ ಆಫೀಸಿಗೆ ಹೋಗಿ. ಬಿಲ್ ತುಂಬಿದ ಮೇಲೆ ಸಂಜೆಗೆ ಲೈಟ್ ಬರಬೇಕು ಎರಡು ದಿವಸ ತಮ್ಮನ ಓದು ಹೇಗೆ?

ಸೈಕಲ್ ಹತ್ತಿಕೊಂಡು ತಕ್ಷಣ ಮಲ್ಲೇಶ್ವರದಲ್ಲಿದ್ದ ಲೈಟ್ ಆಫೀಸಿಗೆ ಹೋದೆ. ಆಫೀಸಿಗೆ ಅರ್ಧ ದಿನವಾದ್ದರಿಂದ ಎಲ್ಲರೂ ಹೊರಟು ಹೋಗಿ ಒಬ್ಬ SDC ಅಷ್ಟೇ ಒಂದು ಮೇಜಿನ ಮುಂದೆ ಕುಳಿತಿದ್ದ. ಧಾವಂತದಿಂದ ಒಳನುಗ್ಗಿದ ನನ್ನನ್ನು ಕಂಡು

'ಏನು ?' ಎನ್ನುವಂತೆ ನನ್ನನ್ನು ನೋಡಿದ. ಒಂದೆರಡು ನಿಮಿಷಗಳಲ್ಲಿ ನನ್ನ ವ್ಯಥೆ ಹೇಳಿಕೊಂಡ. ಲೈಟಿಲ್ಲದಿದ್ದರೆ ನನ್ನ ತಪ್ಪನ್ನು ಹೃತ್ಪೂರ್ವಕವಾಗಿ ಒಪ್ಪಿಕೊಂಡೆ. ಒಂದು ನಿಮಿಷ ನನ್ನನ್ನೇ ನೋಡುತ್ತಿದ್ದ ಆತ 'ಅಲ್ಲಪ್ಪ, ಈವತ್ತು ಶನಿವಾರ ನಮ್ಮ cash transaction ಎಲ್ಲ ಮಧ್ಯಾಹ್ನ ಒಂದು ಗಂಟೆಗೇ ಮುಗಿದು ಹೋಗತ್ತಲ್ಲ' ಈಗ ನೀನು cash ಕೊಟ್ಟರೂ ನಾನು ತೆಗೆದುಕೊಳ್ಳುವ ಹಾಗಿಲ್ಲ ಎಂದು ತನ್ನ ಅಸಹಾಯಕತೆಯನ್ನು ತೋಡಿಕೊಂಡು 'ಹೇಗಾದರೂ ಮಾಡಿ, ದಯವಿಟ್ಟು ಇಂದು ಲೈಟ್ ಕೊಡಿಸಿ' ಎಂದೆ. 'ಹಾಗಾದರೆ ಒಂದು ಕೆಲಸ ಮಾಡು. ಈಗ ನೀನು ಕೊಡ ಬೇಕಾದ ಬಿಲ್ ಹಣಕ್ಕೆ ಒಂದು ಚೆಕ್ ಬರೆದುಕೊಡು. ಅದರ ಮೇಲೆ ಈವತ್ತಿನ ತಾರೀಕು ಇರಲಿ. ಲೈನ್ ಮನನ್ನು ಕಳಿಸಿ ಲೈಟ್ ಕೊಡಿಸುತ್ತೇನೆ' ಎಂದ. ನನ್ನ ಬಳಿ cash ಇತ್ತೇ ಹೊರತು cheque ಪುಸ್ತಕ ಇರಲಿಲ್ಲ. 'ಮನೆಗೆ ಹೋಗಿ ಚೆಕ್ ತರು ತ್ತೇನೆ ಎಂದ. ಆಗ ಸುಮಾರು ೫ ಗಂಟೆ ಆಗಿತ್ತು, ನಾನು ಹೋಗಿ, ಬಂದು, ಚೆಕ್ ಕೊಟ್ಟು ಮತ್ತೆ ಲೈನ್‌ಮನ್ ಬರಬೇಕೆಂದರೆ ಸಂಜೆ ಏಳಾದರೂ ಆಗುತ್ತಿತ್ತು. ಆ ಕ್ಲರ್ಕ್ ಹೇಳಿದ, ಮತ್ತೆ ಬರುವ ತೊಂದರೆ ಬೇಡ ನಿನ್ನ ಒಂದಯೇ ಲೈನ್‌ಮನ್ನನ್ನು ಕಳಿಸುತ್ತೇನೆ. ಅವನು fuse ಹಾಕಿ ಲೈಟ್ ಕೊಡುತ್ತಾನೆ. ಅವನ ಕೈಲೇ cheque ಕಳಿಸಿಕೊಡು. ನಿನ್ನ ತಮ್ಮ ನಿಶ್ಚಿಂತೆಯಿಂದ ಓದಿಕೊಳ್ಳಲಿ ! ಯಾವ ರೀತಿ ಕೃತಜ್ಞತೆ ಹೇಳಬೇಕೋ ನನಗೆ ತಿಳಿಯಲಿಲ್ಲ. ಸಂಜೆ ಆದಕ್ಕೆ ಮುಂಚೆಯೇ ಮನೆಗೆ ಲೈಟ್ ಬಂದಿತ್ತು. ಇಡೀ ಪ್ರಕರಣ ನನ್ನ ತಂಗಿ ಮತ್ತು ನನ್ನನ್ನು ಬಿಟ್ಟರೆ ಮನೆಯಲ್ಲಿ ಬೇರಾರಿಗೂ ತಿಳಿಯಲೇ ಇಲ್ಲ !

'ಏನು ಮಹರಾಯ ! ಹೀಗೇ ಇನ್ನೂ ಎಷ್ಟು ಬುರುಡೆ ಹೊಡೆಯಬೇಕೆಂದು ಹೊರಟಿದ್ದೀಯಾ ?' ಎಂದು ನೀವು ಕೇಳುತ್ತೀರಿ. ಸಹಜವೇ ಆದರೆ ನಾನು ಹೇಳುತ್ತಿರುವುದು ಕಟ್ಟು ಕತೆಯಲ್ಲ ಸ್ವಾಮಿ! ೧೯೫೦ರ ದಶಕದಲ್ಲಿ ನಾನು ಸೆಂಟ್ರಲ್ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದಾಗ ಆದ ಸ್ವಂತ ಅನುಭವವಾಗಿತ್ತು. ಇದೇ ರೀತಿಯ ಅನುಭವ ನನಗೆ ರೇಲ್ವೆ ಸ್ಟೇಶನಲ್ಲಿ, ಪೋಸ್ಟ್ ಆಫೀಸುಗಳಲ್ಲಿ, ವಿಕ್ಟೋರಿಯಾ ಆಸ್ಪತ್ರೆಯಲ್ಲೂ ಕೂಡ(OPDಯಲ್ಲಿ ಕ್ಯೂನಲ್ಲಿ ನಿಂತು ನನಗೆ General check-up ಆಗಬೇಕು ಎಂದು ಕೇಳಿದೆ, ಎರಡೇ ದಿವಸದಲ್ಲಿ ನನ್ನ ಸಂಪೂರ್ಣ check-up ಆಗಿ X-rayಯನ್ನೊಳಗೊಂಡು ಎಲ್ಲ ರಿಪೋರ್ಟುಗಳೂ ನನ್ನ ಕೈ ಸೇರಿತು !) ಎಲ್ಲೂ ಯಾರೂ ನನ್ನ ಹೆಸರನ್ನೂ ಸಹಿತ ಕೇಳಲಿಲ್ಲ. ಯಾವ ರೀತಿಯ connectionಗಳೂ ಇಲ್ಲದ, ಬಡ ಕುಟುಂಬದ ಹುಡುಗನೊಬ್ಬನನ್ನು ಸರ್ಕಾರದ ಇಲಾಖೆಗಳು ಈ ರೀತಿ ನಡೆಸಿಕೊಂಡಾಗ ಪ್ರಜಾಸತ್ತೆಯ ಬಗ್ಗೆ ಅವನಿಗೆ ಹೆಮ್ಮೆ ಎನಿಸದಿರುತ್ತದೆಯೇ ? 'ಮೇರಾ ಭಾರತ್ ಮಹಾನ್ !' ಎಂದು ಯಾರೂ ಯಾರಿಂದಲೂ ಹೇಳಿಸಬೇಕಾಗಿರಲಿಲ್ಲ. ನಿಜವಾಗಿ 'ಮಹಾನ್' ಇದ್ದರೆ ಅದನ್ನು ಹೇಳಬೇಕಾದೀತೆ ?

ಬೇತಾಳವೂ ಎಲೆಯೂ

ಪಾ. ವೆಂ. ಸೂರಿ

ಎಂದಿನಂತೆ ಪುನಃ ರಾಜ ತ್ರಿವಿಕ್ರಮನು ತನ್ನ ಮೊಂಡು ಕತ್ತಿಯನ್ನು ಚೂಪು ಮಾಡಿ ಕೊಂಡು ಯಥಾ ಪ್ರಕಾರ ಮುಳ್ಳು ಮುತ್ತುಗದ ಮರದ ಬಳಿ ಬಂದನು. ಕಾಲಿನ ಬಳಿ ಇದ್ದ ತುರುಚಿ ಗಿಡದ ಎಲೆಗಳನ್ನು ಕತ್ತಿಯಿಂದ ಸವರಿ ಮರದ ಮೇಲಿದ್ದ ಶವ ವನ್ನು ಕತ್ತಿಯಿಂದ ಬಿಡಿಸಿ ತನ್ನ ಹೆಗಲ ಮೇಲೆ ಹಾಕಿಕೊಂಡು ಮೌನವಾಗಿ ವಿಳ್ಳೇದೆಲೆ ಜಗಿಯುತ್ತಾ ಆಲದ ಮರದ ಕಡೆಗೆ ನಡೆಯತೊಡಗಿದನು.

ಆಗ ಶವದೊಳಗಿನ ಬೇತಾಳವು ಮಾತನಾಡಲು ಪ್ರಕ್ರಮಿಸಿತು.

"ಅಯ್ಯಾ ರಾಜನೇ, ಗಿಡದ ಎಲೆಗಳನ್ನು ಎಷ್ಟು ನಾರಿ ಸವರಿದರೂ ಮತ್ತೆ ಮತ್ತೆ ಬೆಳೆಯುವಂತೆ ನೀನೂ ಕೂಡ ಮತ್ತೆ ಮತ್ತೆ ಬಂದು ನನ್ನನ್ನು ಛಲದಿಂದ ಕರೆದುಕೊಂಡು ಹೋಗುತ್ತಿದ್ದೀಯೆ, ನಿನ್ನ ಸಾಹಸ ಮೆಚ್ಚ ತಕ್ಕದ್ದೇ, ನಿನ್ನ ಮಾರ್ಗಾ ಯಾಸ ಪರಿಹಾರವಾಗಲು ಈ ದಿನ ಎಲೆಗಳ ವಿಚಾರ ತಿಳಿಸುತ್ತೇನೆ. ವಿಳ್ಳೆಯದೆಲೆ ಮೇಯುತ್ತಾ ನಡೆ.

ದೇವರ ಪೂಜೆಗೆ ಬರೀ ಪತ್ರೆ ಪುಷ್ಪ ಸಾಕಂತೆ.

> ಪತ್ರಂ ಪುಷ್ಪಂ ಫಲಂ ತೋಯಂ
> ಯೋ ಮೇ ಭಕ್ತ್ಯಾ ಪ್ರಯಚ್ಛತಿ ।
> ತದಹಂ ಭಕ್ತ್ಯು ಪಹೃತಂ
> ಅಶ್ನಾಮಿ ಪ್ರಯತಾತ್ಮನಃ ॥

ಎಂದು ಶ್ರೀ ಕೃಷ್ಣನೇ ಗೀತೆಯಲ್ಲಿ ಅಪ್ಪಣೆ ಕೊಡಿಸಿದ್ದಾನೆ.

ಗಿಡ ಮರಗಳಲ್ಲಿರುವ ಹಣ್ಣು ಎಣಿಸಬಹುದು, ಯಾರಾದರೂ ಎಲೆಗಳನ್ನು ಎಣಿಸುತ್ತಾರೆಯೇ ? ಒಬ್ಬ ರಾಜ ಮರದ ಎಲೆಗಳನ್ನೇ ಎಣಿಸಿದ. ಅವನೇ ನಳ ಮಹಾರಾಜ. ನಳನು ಋತುಪರ್ಣ ರಾಜನನ್ನು ದಮಯಂತಿ ಸ್ವಯಂವರಕ್ಕೆ ಕರೆದು ಕೊಂಡು ಹೋಗುತ್ತಿದ್ದ. ಮಾರ್ಗದಲ್ಲಿ ಒಂದು ಮರವನ್ನು ನೋಡಿ ಋತುಪರ್ಣ ರಾಜನು "ಈ ಮರದಲ್ಲಿ ಇಂತಿಷ್ಟೇ ಎಲೆ ಇದೆ" ಎಂದು ಲೆಕ್ಕ ಹಾಕಿ ಹೇಳಿದ. ಎಣಿಸಿದನಂತೆ. ಲೆಕ್ಕ ಸರಿ ಇತ್ತಂತೆ. ನೋಡಿದೆಯಾ ಎಲೆ ವಿಚಾರ.

ಎಲೆಗಳು ಆಯುರ್ವೇದ ಔಷಧಿಗಳಲ್ಲಿ ಸಂಜೀವಿನಿಯಂತೆ. ಭೋಜನಕ್ಕೆ ಪ್ರಿಯವಾದದ್ದು ಬಾಳೆ ಎಲೆ, ಮುತ್ತುಗದ ಎಲೆ. ಅರಳಿ ಎಲೆ, ಅಡಿಕೆ ಪಟ್ಟೆ, (ಬಾಳೆ) ಎಲೆಯಲ್ಲಿರುವ ವಿಶಿಷ್ಟವಾದ "ಕ್ಲೋರೋ ಫಿಲ್" ಬಿಸಿ ಬಿಸಿ ಊಟ ಮಾಡಿದಾಗ ನಮ್ಮ ಜಠರ ಸೇರಿ ಆರೋಗ್ಯ ವೃದ್ಧಿಸುತ್ತದೆ.

ಶ್ರೀ ಕೃಷ್ಣನಾದರೋ ಬಾಲ್ಯದಲ್ಲಿಯೇ ನೀರಿನ ಮೇಲೆ ಹಾಯಾಗಿ ದೊಡ್ಡ ಆಲದ ಎಲೆ ಮೇಲೆ ಆಟವಾಡಿ ಮಲಗಿದ. ಅವನಿಗೆ ಅದೇ ಸೋಫ! ಈಶ್ವರನಿಗೆ ಬಿಲ್ವಪತ್ರೆ ಪ್ರಿಯವಾದರೆ, ಗಣೇಶನಿಗೆ ದೂರ್ವಾಯುಗ್ಮ (ಗರಿಕೆ ಹುಲ್ಲು) ಇಷ್ಟವಾದುದು. ನಾವು ನಮ್ಮ ಸಂಸಾರದಲ್ಲಿ ತಾವರೆ ಎಲೆ ಮೇಲಿನ ನೀರಿನಂತೆ ಇರಬೇಕೆಂದು ಪ್ರಾಜ್ಞರು ತಿಳಿಸುತ್ತಾರೆ. ತುಳಸಿ ಎಲೆ ಶ್ರೀ ಕೃಷ್ಣನಿಗೆ ಬಹಳ ಪ್ರಿಯ.

ಹೀಗೆ ಒಬ್ಬೊಬ್ಬರಿಗೆ ಒಂದೊಂದು ಪತ್ರೆ, ಎಲೆ ಪ್ರಿಯವಾಗಿರುತ್ತದೆ. ಎಲೈ ರಾಜನೇ ನಿನಗೆ ಯಾವ ಎಲೆ ಪ್ರಿಯವಾದುದು? ನಿಜ ಹೇಳದಿದ್ದರೆ ನಿನ್ನ ತಲೆ ಸಿಡಿಯುತ್ತದೆ ಎಂದು ಹೇಳಿ ಬೇತಾಳವು ಸುಮ್ಮನಾಯಿತು.

ರಾಜಾ ತ್ರಿವಿಕ್ರಮನು ಕತ್ತಿಯನ್ನು ಝಳಪಿಸಿ ಜೋರಾಗಿ ನಕ್ಕು ಈ ರೀತಿ ನುಡಿದನು.

"ನಾನು ಇಷ್ಟಪಡುವುದು ಒಂದು ವಿಚಿತ್ರ ಎಲೆ. ಈ ಎಲೆ ಯಾವ ಗಿಡ, ಮರದಲ್ಲಿ ಬೆಳೆಯುವುದಿಲ್ಲ, ಇಂಗಾಲಾಮ್ಲ ಹೀರಿ ಆಮ್ಲಜನಕ ಕೊಡುವುದಿಲ್ಲ. ಗೃಹಿಣಿಯರಿಗೆ ಬೇಡವಾದ ಈ ಎಲೆ ಅನೇಕ ಗೃಹಸ್ಥರಿಗೆ ಬೇಕು, ಮಾಯಾ ಮಂತ್ರ ಜಾದೂ ಮಾಡುವವರಂತೂ ಈ ಎಲೆಯನ್ನು ಇಟ್ಟುಕೊಂಡಿರುತ್ತಾರೆ. ನಾನು ರಾಜನೆಂದು ನೀನು ಬಲ್ಲೆ. ಆದ್ದರಿಂದಲೇ ರಾಜ, ರಾಣಿ, ಡಯಮಂಡ್, ಜೋಕರ್ ನೈಲ, ಎಕ್ಕ ಇರುವ ಮಹಾನ್ ಎಲೆಯೇ ನನಗೆ ಪ್ರಿಯ! ಎಂದಾಗ, "ಭಲೇ ರಾಜ, ರಾಜನಿಗೆ ತಕ್ಕ ಮಾತು ಹೇಳಿದೆ. ರಾಜ, ರಾಣಿ, ಜೋಕರ್, ಇಸ್ಪೀಟು ಎಲೆ! ನಿನ್ನ ಮೌನ ಮುರಿಯಿತು. ಬರುತ್ತೇನೆ" ಎಂದು ಬೇತಾಳವು ಇಸ್ಪೀಟ್ ಆಟದಲ್ಲಿ ಗೆದ್ದಷ್ಟೇ ಸಂತೋಷದಿಂದ ಶವದೊಂದಿಗೆ ಮಾಯವಾಯಿತು.

ಇತ್ತ ಇಪ್ಪತ್ತೆಂಟರ ಆಟ ಆಡಿ ಸೋತ ರಾಜನು ದಣಿವಾರಿಸಿಕೊಳ್ಳಲು 'ಕ್ಲಬ್ಸ್' ಹುಡುಕಿಕೊಂಡು ಹೋದನು!

ಆಶುಕವಿತ್ವ, ಇತಿಹಾಸ, ರಸಹಾಸ್ಯ

ಅ. ರಾ. ಸೇ

ಎಂಬತ್ತರ ದಶಕದಲ್ಲಿ ನಾನು ಪುನಃ ಪುನಃ ಚಿತ್ರದುರ್ಗದಿಂದ ಭದ್ರಾವತಿಗೆ ಪ್ರಯಾಣ ಮಾಡುತ್ತಿದ್ದೆ. ಈ ಮಾರ್ಗದಲ್ಲಿ ಹೊಳಲ್ಕೆರೆ ರೈಲ್ವೆ ನಿಲ್ದಾಣದಿಂದ ಹೋಗುತ್ತಾ, ಎಡಕ್ಕೆ, ಬರುತ್ತಾ ಬಲಕ್ಕೆ ಒಂದು ರಸ್ತೆ ಸಿಕ್ಕುತ್ತದೆ. ಹೊಳಲ್ಕೆರೆ ರೈಲ್ವೆ ನಿಲ್ದಾಣದಿಂದ ಮಾಳೇನಹಳ್ಳಿಗೆ ಹೋಗುವ ರಸ್ತೆ ಇದು.

ಮಾಳೇನಹಳ್ಳಿ ಹೊಳಲ್ಕೆರೆ ತಾಲ್ಲೂಕಿನಲ್ಲಿರುವ ಹಳ್ಳಿ. ಇಲ್ಲಿ ಶ್ರೀಲಕ್ಷ್ಮೀರಂಗ ನಾಥ ಸ್ವಾಮಿಯ ದೇವಾಲಯವಿದೆ. ಮಾಳೇನಹಳ್ಳಿ ಒಂದು ಐತಿಹಾಸಿಕ ಸ್ಥಳ. 1945ರಲ್ಲಿ ಶ್ರೀ ಶಂಕರಲಿಂಗ ಭಗವಾನರು. ಇಲ್ಲಿ ಸನ್ಯಾಸ ತೆಗೆದುಕೊಂಡಾಗ ನಾನು ಅಲ್ಲಿಗೆ ಮೊದಲ ಬಾರಿ ಹೋಗಿದ್ದೆ. ಇತ್ತೀಚೆಗೆ ಅಲ್ಲಿಗೆ ಹೆಚ್ಚಾಗಿ ಹೋಗಿರಲಿಲ್ಲ ವಾದುದರಿಂದ, ನಾನು ಆ ರಸ್ತೆಯನ್ನು ನೋಡಿದಾಗಲೆಲ್ಲಾ ಕೈಮುಗಿದು ಈ ಶ್ಲೋಕವನ್ನು ಹೇಳುತ್ತಿದೆ.

ಮಾಲಾಪುರಸ್ಥಂ ತ್ರಿಪುರಾರಿಮಿತ್ರಂ
ಕೌಮೋದಕೀ ನಂದಕ ಚಕ್ರಪಾಣಿಂ
ಭಕ್ತಿಪ್ರಿಯಂ ಶಂಕರಲಿಂಗ ರೂಪಂ
ಶ್ರೀರಂಗನಾಥಂ ಶರಣಂ ಪ್ರಪದ್ಯೇ

ಇದು ಸಾಂಪ್ರದಾಯಿಕ ಪ್ರಾರ್ಥನೆಯೋ. ಆಶುಕವಿತೆಯೋ !

೨. ಮಾಳೇನ ಹಳ್ಳಿ ಐತಿಹಾಸಿಕ ಸ್ಥಳವೆಂದು ಹೇಳಿದೆನಷ್ಟೆ, ಎಪಿಗ್ರಾಫಿಯ ಕರ್ನಾಟಕದ ಎರಡು ಶಾಸನಗಳು, ಈ ಊರಿನಲ್ಲಿ ದೊರೆತವಾಗಿವೆ. ಕ್ರಿ. ಶ. 1076–1176 ರ ಅವಧಿಯದಾದ ಒಂದು ಶಾಸನ ತುಂಬಾ ತ್ರುಟಿತವಾ ಗಿದೆ. ಈ ಶಾಸನ ಸತ್ಯಾಶ್ರಯ, ತ್ರಿಭುವನಮಲ್ಲ ಇತ್ಯಾದಿ ಹೆಸರುಗಳನ್ನು ಹೊಂದಿದ್ದ ಆರನೆಯ ವಿಕ್ರಮಾದಿತ್ಯನ ಕಾಲದ್ದು. ಈ ಶಾಸನದಲ್ಲಿ ಕಲಿದೇವರು, ಆಚೇಶ್ವರ ದೇವರುಗಳ ನೈವೇದ್ಯಕ್ಕೆ ದತ್ತಿ ಬಿಟ್ಟ ವಿಷಯವಿದೆ. ಇನ್ನೊಂದು ಶಾಸನ, ದೇವಾಲಯದ ಕಂಬದ ಮೇಲಿದೆ. 26–10–1492 ಶನಿವಾರ ಪೌರ್ಣಮಿ ಯಂದು ಈ ಶಾಸನ ನಿರ್ಮಿತಿಯಾಗಿದೆ.

ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರುಷ ಸಾ 1405ಯ ಶೋಭಕೃತು ಸಂವತ್ಸರದ ಕಾರ್ತಿಕ ಶು ೧೫ಯಲೂ ಶ್ರೀಮನ್ಮಹಾಮಂಡಲೇಶ್ವರ ತಿಮ್ಮಯ್ಯದೇವಚೌಡ ಮಹಾ ಅರಸುಗಳು ಚಿಂ–ತನಕಲನಾಡುವೊಳಗಣ ನುಲೆಯ ನೂರ ಸ್ಥಳದ ಮಾಳೇನಹಳ್ಳಿಯ ತಿರುಮಲೆ ದೇವರ ಅಂಗ ರಂಗ ಭೋಗ ನೆಮಿವೇದ್ಯ ನ

ತಿಮ್ಮಯ್ಯದೇವ ಎಂದರೆ ಯಾರು ಚೌಡಮಹಾ ಅರಸು ಯಾರು ಎನ್ನುವುದರ ಬಗೆಗೆ ಸಂಶೋಧನೆ ನಡೆಯುತ್ತಿದೆ.

ಈ ಶಾಸನವನ್ನು ಬರೆದುಕೊಳ್ಳಲು ನನಗೆ ಅವಕಾಶ ಮಾಡಿಕೊಟ್ಟ ಶ್ರೀ ಸೀತಾರಾಮ ಜಹಗೀರ್‌ದಾರ್ ಅವರಿಗೂ, ಈ ಶಾಸನದ ಬಗೆಗೆ ನನಗೆ ಮೊದಲು ತಿಳಿಸಿದ ಶ್ರೀ ಲಕ್ಷ್ಮಣ ತೆಲಗಾವಿ ಅವರಿಗೂ ಕೃತಜ್ಞತೆಗಳು.

೩. ಶ್ರೀ ರಂಗನಾಥನನ್ನು ಕುರಿತ ಒಂದು ಕೀರ್ತನೆಯನ್ನು ಎಲ್ಲೋ ಓದಿದ ನೆನಪು ನನ್ನನ್ನು ಕಾಡಿಸುತ್ತಿತ್ತು. ನನಗೆ ಸಿಕ್ಕ ಯಾವ ಪುರಂದರದಾಸರ ಕೀರ್ತನೆಯ ಪುಸ್ತಕಗಳಲ್ಲೂ ಅದು ಸಿಕ್ಕಲಿಲ್ಲ. ಅದಕ್ಕೆ ಕಾರಣವೇನೆಂದರೆ ಅದು ಕನಕದಾಸರ ಕೀರ್ತನೆ.

ಆ ಕೀರ್ತನೆ ದಶಾವತಾರವನ್ನು ಕುರಿತದ್ದು. ಅದನ್ನು ರಸಹಾಸ್ಯ ಎಂದು ನಾನು ಕರೆಯುತ್ತೇನೆ. ಏಕೆಂದರೆ ಇದು ಮೂದಲೆ, ಕಟಕಿ, ನಿಂದಾಸ್ತುತಿ ಎಂಬ ತಲೆ ಬರಹಗಳಡಿ ಸೇರುವುದಲ್ಲ. ಇದು ಪರಾಭಕ್ತಿಯಲ್ಲಿ ದಾಸ್ಯಕ್ಕೆ ಇರುವ ವ್ಯಾಶಸ್ತ್ಯವನ್ನು ಓದುಗರೇ ಸವಿಯಬೇಕೆಂದು ಕೋರುತ್ತೇನೆ.

ರಾಗ – ಸಾರಂಗ ತಾಳ – ಅಟ್ಟ

ನಿನ್ನ ನಾನೇನೆಂದೆನೊ ರಂಗಯ್ಯ ರಂಗ
ನಿನ್ನ ನಾನೇನೆಂದೆನೋ ? ॥ ಪಲ್ಲವಿ ॥

ನಿನ್ನನಾನೇನೆಂದೆ ಚಿನ್ಮಯ ಮೂರುತಿ
ಪನ್ನಗ ಶಯನ ಪಾಲ್ಗಡಲೊಡೆಯನೆ ಕೃಷ್ಣ । ಅ.ಪ ।
ಧೀರ ಸೋಮಕ ವೇದ ಚೋರನ ಮಡುಹಿದೆ
ವಾರಿಧಿಗಿಳಿದ ಪರ್ವತವ ಪೊತ್ತೆ
ಧಾರಿಣಿಯನು ತಂದು ದನುಜ ದಲ್ಲಣನಾದೆ
ನಾರಸಿಂಹನೆ ನಿನಗೆ ನಮೋ ಎಂದೆನಲ್ಲದೆ

ನೀರ ಪೊಕ್ಕವನೆಂದೆನೆ – ಬೆನ್ನಿನ ಮೇಲೆ
ಭಾರತಾಳ್ದವನೆಂದೆನೆ ಮಣ್ಣನಗೆದು
ಪೇರ ಮೆದ್ದವನೆಂದೆನೆ ರಕ್ಕಸರೊಳು
ಹೋರಾಡಿದವನೆಂದು ಪೊಗಳಿದೆನಲ್ಲದೆ ||೧||

ಧರೆಯ ದಾನವ ಬೇಡಿ ನೆಲನ ಮೂರಡಿ ಮಾಡಿ
ಪರುಶುವಿಡಿದು ಕ್ಷತ್ರಿಯರ ಸವರಿ
ಚರಣದಿ ಪಾಷಾಣ ಹೆಣ್ಣು ಮಾಡಿದ ಪುಣ್ಯ
ಚರಿತ ಯಾದವ ಪತಿ ಶರಣೆಂದೆನಲ್ಲದೆ

ತಿರುಕ ಹಾರುವ ನೆಂದೆನೆ – ಹೆತ್ತತಾಯ
ಶಿರಕೆ ಮುನಿದವನೆಂದೆನೆ – ವನದೇಶದಿ
ಧುರಕೆ ನಿಂದವನೆಂದೆನೆ – ಪೂತನಿಮೊಲೆಯ
ಹರಿದು ಕೊಂದವನೆಂದು ಸ್ತುತಿಸಿದೆನಲ್ಲದೆ ||೨||


ಚಿತ್ತಜ ಕೋಟಿ ಲಾವಣ್ಯ ಮುಪ್ಪುರದೊಳು
ಉತ್ತಮ ಸ್ತ್ರೀಯರ ವ್ರತವಳಿದೆ
ಮತ್ತೆ ಕಲ್ಕಿಯಾದೆ ಮಲೆತರ ಮಡುಹಿದೆ
ಉತ್ತಮ ಶ್ರೀರಾಮ, ಸ್ತುತಿಸಿದೆನಲ್ಲದೆ

ಬತ್ತಲೆ ನಿಂತವನೆಂದೆನೆ ತೇಜಿಯನೇರಿ
ಒತ್ತಿ ಬಾಹವನೆಂದನೆ ಬಾರಿ ಬಾರಿಗೆ
ಸತ್ತು ಹುಟ್ಟುವನೆಂದೆನೆ – ಆದಿಕೇಶವ
ಹತ್ತವತಾರದ ಹರಿಯೆಂದೆನಲ್ಲದೆ ||೩||
ನಿನ್ನ ನಾನೇನೆಂದೆನೊ.

(ಈ ಕೀರ್ತನೆಯನ್ನು ನನಗೆ ಒದಗಿಸಿದ ಮೈಸೂರು ವಿಶ್ವವಿದ್ಯಾನಿಲಯದ ಶ್ರೀಮತಿ ನಾಗರತ್ನ ಅವರಿಗೆ ಕೃತಜ್ಞತೆಗಳು).

ಪಂಚ್‌ಗೆ ವಿದಾಯ!

ಪ್ರಕಾಶ್



ಉದ್ದನೆ, ಬಾಗಿರುವ 'ಮೂಗು, ಮುಖದಲ್ಲಿ ತುಂಟ ನಗೆ, ತಲೆಯ ಮೇಲೆ ಕ್ಲೌನ್ ತರಹ ಟೋಪಿ. ಕಾಲ ಹತ್ತಿರ ಒಂದು ನಾಯಿ. ಈ ಚಿತ್ರ ಪಂಚ್‌ನ ಮುಖ ಪುಟದಲ್ಲಿ ಬಹು ಕಾಲ ರಾರಾಜಿಸಿತು. ನನಗೆ ಮೂರೋ ನಾಲ್ಕೋ ವಯಸ್ಸಿರಬಹುದು. ಈ ಚಿತ್ರ ನೋಡಿದಾಗ ಏನು ಒಂದು ಅವ್ಯಕ್ತ ಖುಷಿ! ಪಂಚ್ ಮತ್ತು ಜೂಡಿ ಎಂಬ ಬಹು ಹಿಂದಿನ ಫ್ರೆಂಚ್ ಕಾಲ್ಪನಿಕ ಪಪೆಟ್‌ಷೋನಿಂದ ಪ್ರಭಾವಿತವಾಗಿ ಹಾಸ್ಯ ಪತ್ರಿಕೆಯ ಲಾಂಛನವಾಗಿತ್ತು. ರಾ. ಶಿ. ಯವರಿಗೆ ಪಂಚ್ ಪ್ರಾಣ (ಪನ್ ಪುಲ್ಲಿ ಇಂಟೆಂಡೆಡ್!) ವಾಗಿದ್ದ ಪತ್ರಿಕೆ, ನಮಗೆ ಓದು ಬರಹ ಬರುಕ್ಕೆ ಮುಂಚಿನಿಂದಲೂ ತೀರ ಪರಿಚಿತ. ಮೊದ ಮೊದಲಿಗೆ ಕಾರ್ಟೂನ್‌ಗಳನ್ನೇ ನೋಡಿ ಖುಷಿಪಡುತ್ತಿದ್ದ ನಮಗೆ, ಬರ ಬರುತ್ತ ಪಂಚ್‌ನ ವೈವಿಧ್ಯಮಯ ಹಾಸ್ಯದ ಅನುಭವ ಆಗುತ್ತ ಬಂತು. ರಾ.ಶಿ. ಯವರು ಕೊರವಂಜಿಗೆ ಅಳವಡಿಸಿ ಚಿತ್ರಿಸಬಹುದಾದ ಲೇಖನಗಳು, ಕುಹಕಿಡಿಗಳನ್ನ ಪೆನ್ಸಿಲ್ಲಿನಲ್ಲಿ ಗುರುತು ಹಾಕಿರುತ್ತಿದ್ದರು. 'ಚರಿವರಿಯ' ಅಂತ ಮೊದಲ ಪುಟದಲ್ಲಿ ಬರುತ್ತಿದ್ದ ಕಾಲಂ ಕೊರವಂಜಿಯ ಉರಿಗಾಳು ಹಾಗೂ ಕುಹಕಿಡಿಗಳ ಮೂಲ ಪ್ರೇರಕ. ಸುದ್ದಿಯ ಸ್ವಾರಸ್ಯಗಳನ್ನು ಓರೆ ನೋಟದಲ್ಲಿ ನೋಡಿ

ನಗೆ ಬಾಣ ಬೀರೋದರಲ್ಲಿ ಪ್ರಾಯಶಃ 'ಚಲವರಿಯ' ಪ್ರಪಂಚದಲ್ಲೋ ಮೊದಲನೇ ಸ್ಥಾನ ಪಡೆದಿತ್ತು. ಕಾಲದಿಂದ ಕಾಲಕ್ಕೆ ಬದಲಾಗುವ ರಾಜಕೀಯ ಪರಿಸ್ಥಿತಿ. ಮಹಾ ಯುದ್ಧದ ಭೀತಿ, ಬವಣೆಗಳು, ಹಲವಾರು ಸಾಮಾಜಿಕ ವಿಷಯಗಳ ಬಗ್ಗೆ ಕೊಂಕು ನುಡಿ, ಸಿನಿಮಾಗಳ ವಿಮರ್ಶೆಗಳು, ಇಂಗ್ಲೆಂಡಿನ ಪಾರ್ಲಿಮೆಂಟಿನ ಕಲಾಪಗಳ ಬಗ್ಗೆ ಮನೋಜ್ಞ ಚಿತ್ರಣಗಳು—ಹೀಗೆ ವಿವಿಧ ರೂಪದ ಲೇಖನಗಳು, ಚುಟುಕಗಳಿಂದ ಪಂಚ್ ಪ್ರಸಿದ್ಧಿ ಪಡೆಯಿತು. ಇದಲ್ಲದೆ, ಕ್ರೀಡೆಗಳು ಹಾಗೂ ಕ್ರೀಡಾ ಪಟುಗಳ ಬಗ್ಗೆ ವ್ಯಂಗ ನುಡಿ ಹಾಗೂ ಕಾರ್ಟೂನ್‌ಗಳು ಜನರ ಮನಗಳನ್ನ ಆಕರ್ಷಿಸುತ್ತಿದ್ದವು. ನಮ್ಮ ದೇಶದಲ್ಲಿ ಹಲವು ವರ್ಷ ವಿಜೃಂಭಿಸಿದ ಶಂಕರ್ಸ್ ವೀಕ್ಲಿಯ ಜನಕ ಶಂಕರ್ ಸಹ ಪಂಚ್‌ನಿಂದ ಪ್ರಭಾವಿತರಾಗಿದ್ದರೆಂಬುದು ಸರ್ವವಿದಿತ.

ನೂರಾರು ಜನ ಕಾರ್ಟೂನಿಸ್ಟುಗಳಿಗೆ ಪಂಚ್ ಆಶ್ರಯ ಕೊಟ್ಟಿತ್ತು. ಅವರಲ್ಲಿ ಕೆಲವು ಪ್ರಮುಖ ಹೆಸರುಗಳೆಂದರೆ—ಡೇವಿಡ್ ಲ್ಯಾಂಗ್ಡನ್, ಲಾರಿ, ಹೀತ್, ಮಹೂದ್, ಹಾಲ್ಡೇನ್, ಫೋಕ್ಸ್, ಡಗ್ಲಾಸ್ ಇತ್ಯಾದಿ ಇತ್ಯಾದಿ.

ಇವರಲ್ಲಿ ಕೆಲವರು ರಾಜಕೀಯ ಕಾರ್ಟೂನ್‌ಗಳನ್ನೇ ಬರೆಯುವುದರಲ್ಲಿ ಪರಿಣತರಾದರೆ ಇನ್ನು ಕೆಲವರು ಯಾವ ಸುದ್ದಿಯನ್ನಾದರೂ ಕಾರ್ಟೂನ್ ರೂಪಕ್ಕೆ ತರುವ ಪ್ರತಿಭಾವಂತರಾಗಿದ್ದರು. ಇನ್ನು ಮುಂದೆ ಆಂಗ್ಲ ಭಾಷೆಯ ಇತರ ಪತ್ರಿಕೆಗಳಲ್ಲಿ ಹಲವು ಪಂಚ್‌ನ ಮಾಜೀ ಕಾರ್ಟೂನಿಸ್ಟುಗಳ ಕುಂಚಗಳು ಕಾರ್ಯ ಮಾಡುವುದರಲ್ಲಿ ಸಂಶಯವಿಲ್ಲ.

ನೂರ್ರೈವತ್ತೊಂದು ವರ್ಷ ನಡೆದು ಬಂದು ಹಾಸ್ಯ ಸಾಹಿತ್ಯದ ಹಲವು ಪ್ರಖ್ಯಾತ ಲೇಖಕರನ್ನು ಪೋಷಿಸಿದ ಪಂಚ್‌ನ ಹಾದಿ ಬಹಳ ದೀರ್ಘ. ಕ್ರಿಸ್‌ಮಸ್ ಕಾಲದಲ್ಲಿ ವರ್ಣರಂಜಿತವಾಗಿ ಹೊರಬರುತ್ತಿದ್ದ ಪಂಚ್‌ನ ಮುಖ ಪುಟಗಳು ಕಣ್ಣಿಗೆ ಬಹು ಆಕರ್ಷಕ. ಆಂಗ್ಲ ಸಾಹಿತ್ಯದಲ್ಲಿ ಹೆಸರುವಾಸಿಯಾಗಲು ಪಂಚ್‌ನ ಆಸರೆ ಪಡೆದು ಕೀರ್ತಿವಂತರಾದ ಕೆಲವು ಲೇಖಕರೆಂದರೆ ಬ್ರಾಡ್‌ಫರ್ಡ್, ವುಡ್‌ಹೌಸ್ (ಹೌದು

ಪಿ. ಜಿ. ವುಡ್ ಹೌಸ್ !), ಎಲ್ಲಿಸ್, ಕಾಕ್‌ಬರ್ನ್, ಸೇಲ್, ಕೀಟಿಂಗ್, ಹಂಟರ್ ಡೇವೀಸ್, ರಾಬರ್ಟ್ ಬಕ್‌ಮನ್ ರಿಚರ್ಡ್ ಗಾರ್ಡನ್ (ಡಾಕ್ಟರ್ ಸೀರೀಸ್ ಖ್ಯಾತಿ !), ಅಲನ್ ಕೊರೆನ್, ಜೂಲಿಯು ಲ್ಯಾಂಗ್ಡನ್, ಇತ್ಯಾದಿ.

ಜಗತ್ತಿನಲ್ಲೆಲ್ಲ ಇಷ್ಟು ಪ್ರಖ್ಯಾತವಾಗಿದ್ದರೂ, ಪ್ರತಿ ವಾರವೂ ಪತ್ರಿಕೆ ಹೊರ ಬರಲು ಹಣದ ಕೊರತೆ ಹೆಚ್ಚಾಗುತ್ತ ಬಂತು. ಪತ್ರಿಕೆಯ 'ನಷ್ಟಿಪರು' ಕೊನೆಗೆ (ಕೊರವಂಜಿಯಂತೆಯೇ) ಪಂಚ್ ಅನ್ನೂ ಕಾಡಿಗೆ ಕಳಿಸಬೇಕಾಯಿತು. ಕೊನೆಯ ಪಂಚ್ ಪತ್ರಿಕೆಯ ಮುಖ ಪುಟದಲ್ಲಿ ಪಂಚ್ ಹಾಗೂ ಟೋಬಿ (ನಾಯಿ) ಓದುಗರಿಗೆ ಬೆನ್ನು ತೋರಿಸಿ ದಿಗಂತದ ಸೂರ್ಯಾಸ್ತದೆಡೆಗೆ ಹೋಗುತ್ತಿರುವುದು ಹಾಸ್ಯ ಪ್ರಿಯರಿಗೆಲ್ಲ ದುಃಖದಾಯಕ. ಇಂಗ್ಲೆಂಡಿನ ಹಾಸ್ಯ ಪ್ರಿಯರು ಮುಂದೆ ಮಾಸಿಕ ಹಾಸ್ಯ ಪ್ರಧಾನ ಪಂಚ್ ತರಹ ಪತ್ರಿಕೆಯನ್ನು (ಅಪರಂಜಿ ತರಹ) ತರಲಿ ಅಂತ ಹಾಸ್ಯ ಪ್ರಿಯ ದೇವರನ್ನು ಪ್ರಾರ್ಥಿಸೋಣ !

ಅಂಗಡಿಯಲ್ಲಿ

'ಏನ್ರೀ ನೀವು ಈ ಮಿಕ್ಸಿಗೆ ಇಷ್ಟೊಂದು ಬೆಲೆ ಹೇಳ್ತೀರಿ ? ಬೇರೆ ಕಂಪನಿಯೋರು ಇದರ ಅರ್ಧ ಬೆಲೆಗೆ ಕೊಡ್ತಿದಾರೆ ? "


"ಹೌದು ಸಾರ್, ಅವರೂ ನಂಬಿಕಸ್ತರು. ಅವರ ವಸ್ತುವಿನ ಗುಣಮಟ್ಟ ಅವರಿಗೆ ಚೆನ್ನಾಗಿ ಗೊತ್ತು"

–ಭೈರಪ್ಪ ನಂಜುಂಡಯ್ಯ.

ಜನಪ್ರಿಯ ನಗೆಗಾರರು

ಪಿ. ಜಿ. ವುಡ್‌ಹೌಸ್

ಶಿವು



ಕನ್ನಡದ ಓದುಗರಿಗೆ ವುಡ್‌ಹೌಸ್‌ನ ಹಾಸ್ಯದ ರಸ ದೌತಣದ ರುಚಿಯನ್ನು ಪರಿಚಯಿಸಿದ ಕೀರ್ತಿ 'ಕೇಫ' ಅವರಿಗೆ ಸಲ್ಲಬೇಕು. 'ಕೇಫ' ಸೃಷ್ಟಿಸಿದ ಶೌರಿ, ಪಾಂಡು ಪಾತ್ರಗಳು, ವುಡ್‌ಹೌಸ್‌ನ ಖ್ಯಾತ ಪಾತ್ರಗಳಾದ ಜೀವ್ಸ್ ಹಾಗೂ ಬೆರ್ಟಿ ವೂಸ್ಕರ್‌ಗಳ ಪ್ರತಿ ರೂಪಗಳು. ಬೆರ್ಟಿಗೆ ಫ್ರೆಂಡ್, ಫಿಲಾಸಫರ್ ಹಾಗೂ ಗೈಡ್ ಆಗಿದ್ದ ಜೀವ್ಸ್. ಕಾನನ್ ಡಾಯ್ಲ್ ಸೃಷ್ಟಿಸಿದ ಷೆರ್ಲಾಕ್ ಹೋಮ್ಸ್‌ನಂತೆಯೇ ಜಗದ್ವಿಖ್ಯಾತ ಪಾತ್ರಗಳಲ್ಲಿ ಒಬ್ಬ. ವುಡ್‌ಹೌಸ್ ರಚಿಸಿದ ವಿಪುಲವಾದ ಹಾಸ್ಯ ಸಾಹಿತ್ಯದಲ್ಲಿ ಜೀವ್ಸ್‌ನಂತೆಯೇ ಇನ್ನೂ ಅನೇಕ ಪಾತ್ರಗಳು ಖ್ಯಾತಿಯನ್ನು ಪಡೆದಿವೆ.

ವುಡ್‌ಹೌಸ್ ಹುಟ್ಟಿದ್ದು 1881ರಲ್ಲಿ ಇಂಗ್ಲೆಂಡಿನಲ್ಲಿ. ಡಲ್‌ವಿಚ್ ಕಾಲೇಜಿನಲ್ಲಿ ವ್ಯಾಸಂಗ. ಚಿಕ್ಕ ವಯಸ್ಸಿನಿಂದಲೇ ಹಾಸ್ಯಬರವಣಿಗೆಯತ್ತ ಒಲವು. ಮೊದಲ ಹಲವು ಲೇಖನಗಳು 'ಗ್ಲೋಬ್' ಮತ್ತು 'ದಿ ಕ್ಯಾಪ್ಟನ್' ಪತ್ರಿಕೆಗಳಲ್ಲಿ ಪ್ರಕಟವಾದವು. ಅನಂತರ ಹಾಸ್ಯಕಾದಂಬರಿಗಳ ಸರಣಿ ಜೀವ್ಸ್, ಬೆರ್ಟಿವೂಸ್ಟರ್ ಅಲ್ಲದೆ ಮುಲ್ಲಿನೀರ್, ಲಾರ್ಡ್ ಎಮ್ಸ್‌ವರ್ತ್, ಆಂಟ್ ಆಗಾಥಾ, ಸ್ಮ್ಯಾಲಿ, ಹೀಗೆ ಆಗಿನ ಇಂಗ್ಲಿಷ್ ಸಮಾಜದಲ್ಲಿ ಕಾಣ ಸಿಗುತ್ತಿದ ಅನೇಕ ವ್ಯಕ್ತಿಗಳ ವಿಕಟ ಪ್ರತಿ ರೂಪಗಳನ್ನು ವುಡ್‌ಹೌಸ್ ಸೃಷ್ಟಿಸಿ ತನ್ನ ಕಾದಂಬರಿಗಳಲ್ಲಿ ಅಳವಡಿಸಿದ. ವುಡ್‌ಹೌಸ್‌ನ ಹಾಸ್ಯ ಪ್ರಧಾನವಾಗಿ ಭಾಷೆಯನ್ನು ಅವಲಂಬಿಸಿದ್ದು. ಸ್ಪ್ರಿಂಗ್ ಫೀವರ್ (ಚೈತ್ರ ಚೈತನ್ಯ?) ಎಂಬ ಕಾದಂಬರಿಯ ಮೊದಲ ಸಾಲುಗಳನ್ನು ನೋಡಿ.

"ನ್ಯೂಯಾರ್ಕಿಗೆ ವಸಂತ ಮಾಸ ಆಗಮಿಸಿತ್ತು. ಎಂಟೂ ಕಾಲು ಗಂಟೆಗೆ ಬರಬೇಕಾದ ಗ್ರೇಟ್ ನೆಕ್ ರೈಲು, ಪೆನಿಸಿಲ್ವೇನಿಯಾ ನಿಲ್ದಾಣಕ್ಕೆ ಆಗಮಿಸಿತ್ತು. ಲೇವಾದೇವಿಗಾರ. ಜೆ. ಎಲ್ಲರಿ ಕೊಬಾಲ್ಟ್, ಇನ್ನೊಂದು ಪೈಂಟ್ ಬಡವರ ರಕ್ತ ಹೀರಲು ತನ್ನ ಆಫೀಸಿಗೆ ಆಗಮಿಸಿದ್ದ. ಇದೊಂದು ಆಗಮನಗಳದಿನ" ಪ್ರಾರಂಭದಲ್ಲಿಯೇ ! ಓದುಗರ ಆಸಕ್ತಿಯನ್ನು ಸೆರೆಹಿಡಿಯುವುದು ವುಡ್‌ಹೌಸ್ ಕಾದಂಬರಿಗಳ ಲಕ್ಷಣ. 'ಎ ಡ್ಯಾಮ್ಸೆಲ್ ಇನ್ ಡಿಸ್ಟ್ರೆಸ್' ಕಾದಂಬರಿಯೂ ಸಹ ಈ ನಿಯಮಕ್ಕೆ ಹೊರತಾಗಿಲ್ಲ. ಇಲ್ಲಿ ನೋಡಿ.

"ಹ್ಯಾಂಪ್‌ಷೈರ್ ಕೌಂಟಿಯಲ್ಲಿನ ಚರಿತ್ರಾರ್ಹವಾದ ಬೆಲ್‌ಫರ್ ಅರಮನೆ ಈ ಕಾದಂಬರಿಯ ಮುಖ್ಯ ರಂಗಭೂಮಿ. ಹಾಗಾಗಿ, ಈ ಅರಮನೆಯ ಸುಂದರ ಪರಿಸರ, ಅನೇಕ ತಲೆಮಾರುಗಳಿಂದ ಇಲ್ಲಿ ವಾಸಿಸುತ್ತಿರುವ ಮಾರ್ಷ್‌ಮಾರ್ಟನ್ ಅರಸರ ಭವ್ಯ ಚರಿತ್ರೆ, ಇವುಗಳ ಬಗ್ಗೆ ಸವಿಸ್ತಾರವಾಗಿ ಹೇಳುವುದು ಅತ್ಯಗತ್ಯ. ಆದರೆ ಈಗಿನ ಬಿರುಸಿನ ಓಡಾಟದ ದಿನಗಳಲ್ಲಿ ಕಾದಂಬರಿಕಾರ ಒಂದು ಅನಾನುಕೂಲತೆಯಿಂದ ಬಳಲುತ್ತಾನೆ. ಓಡುತ್ತಿರುವ ಬಸ್ಸನ್ನು ಎಗರಿ ಹತ್ತುವ ಪ್ರಯಾಣಿಕನಂತೆ ಆಧುನಿಕ ಕಾದಂಬರಿಕಾರ, ಕಾದಂಬರಿಯ ಪ್ರಾರಂಭದಲ್ಲೇ ಮುಖ್ಯ ವಿಷಯಕ್ಕೆ ಬರಬೇಕಾಗುತ್ತದೆ. ಮಿಂಚಿನ ವೇಗದಲ್ಲಿ ಆತ ಕಥೆಯನ್ನು ಪ್ರಾರಂಭಿಸಿದಿದ್ದರೆ, ಓದುಗರು ಪುಸ್ತಕವನ್ನು ಬದಿಗೆಸೆದು, ಸಿನಿಮಾ ನೋಡಲು ಹೊರಡುವುದು ಖಂಡಿತ"

ಹೀಗೆ ಪ್ರಾರಂಭವಾದ ಕಾದಂಬರಿ ಕೊನೆಯ ವರೆಗೂ ಹಾಸ್ಯ ಪ್ರಸಂಗಗಳಿಂದ ಸಮೃದ್ಧವಾಗಿ ಓದುಗರ ಆಸಕ್ತಿ ಕುಂದದಂತೆ ಓದಿಸಿಕೊಂಡು ಹೋಗುತ್ತದೆ. ಒಂದು ಪ್ರಸಂಗದಲ್ಲಿ ಒಬ್ಬ ಶ್ರೀಮಂತ ತರುಣ (ಲಾರ್ಡ್‌ಬೆಲ್ಫರ್) ಯಾವುದೋ ರಸ್ತೆ ಜಗಳದಲ್ಲಿ ಸಿಕ್ಕಿಕೊಂಡಿರುತ್ತಾನೆ. ಈ ಜಗಳ ಬಿಡಿಸಲು ಪೋಲೀಸ್ ಪ್ಯಾದೆಯೊಬ್ಬ ಬಂದಾಗ, ಜಗಳದ ಅಮಲಿನಲ್ಲಿ ಬೆಲ್ಫರ್ ಪೋಲೀಸ್ ಪ್ಯಾದೆಯ ಹೊಟ್ಟೆಗೆ ಗುರಿಯಿಟ್ಟು ಗುದ್ದುತ್ತಾನೆ. ಅನಂತರ ಪ್ಯಾದೆ ಅವನನ್ನು ಠಾಣೆಗೆ ಕರೆದೊಯ್ದು ಕೋರ್ಟಿನಲ್ಲಿ ಜುಲ್ಮಾನೆ ವಿಧಿಸುವಂತೆ ಮಾಡುತ್ತಾನೆ. ಈ ಪ್ರಸಂಗವನ್ನು ಒಬ್ಬ ಬಾತ್ಮೀದಾರ ಕಾವ್ಯಮಯ ಶೈಲಿಯಲ್ಲಿ ಬರೆಯುವ ವೈಖರಿಯನ್ನು ವುಡ್‌ಹೌಸ್‌ನ ಮೂಲ ಇಂಗ್ಲೀಷಿನಲ್ಲಿಯೇ ಓದಿ ಸವಿಯಬೇಕು.

"THE PEER AND THE POLICEMAN."

"Outside the 'Carlton" tis averred, these stirring happenings occurred. The hour,' tis said (and no one doubts) was half-past two, or there-abouts. The day was fair. the sky

was blue, and everything was peaceful, too, when suddenly a well dressed gent engaged in heated argument and roundly to abuse began another well dressed gentleman. His suede-gloved fist he raised on high to dot the other in the eye. Who knows what horrors might have been, had there not come upon the scene old London City's favourite son, Policeman C.231. 'What means this conduct? Prithee stop!' exclaimed that admirable slop. With which he placed a warning hand upon the brawler's collarband. We simply hate to tell the rest. No subject here for flippant jest. The mere remembrance of the tale has made our ink turn deadly pale. Let us be brief. Some demon sent stark madness on the well-dressed gent. He gave the constable a punch just where the latter kept his lunch. The constable said 'Well Well Well' and marched him to a dungeon cell. At Vine Street Station out it came—Lord Belpher was the culprit's name. But British Justice is severe alike on pauper and on peer; with even hand she holds the scale; a thumping fine, in lieu of gaol, induced Lord B. to feel remorse and learn he mustn't punch the Force."

ವುಡ್‌ಹೌಸ್ ಹಾಸ್ಯ ಪ್ರಜ್ಞೆಯ ಇನ್ನೊಂದು ತುಣುಕನ್ನು "ವೆರಿ ಗುಡ್ ಜೀವ್ಸ್" ಕಾದಂಬರಿಯ ಮುನ್ನುಡಿಯಲ್ಲಿ ಕಾಣಬಹುದು. ಈ ಮುನ್ನುಡಿಯಲ್ಲಿ ವುಡ್ ಹೌಸ್, ಓದುಗರು ತನ್ನ ಹಿಂದಿನ ಎರಡು ಕಾದಂಬರಿಗಳನೂ ಕೊಳ್ಳಬೇಕೆಂದು ತಾರೀಫು ಮಾಡುತಾನೆ. ಇಂಗ್ಲೀಷ ಮತ್ತು ಫ್ರೆಂಚ್‌ಗಳಲ್ಲಿ ಬರೆದಿರುವ ಈ ಭಾಗ ವನ್ನು ನಾನು ಕನ್ನಡ ಮತ್ತು ತಮಿಳಿನಲ್ಲಿ ಛಾಯಾನುವಾದ ಮಾಡಿದ್ದೇನೆ. ವುಡ್ ಹೌಸ್‌ನ ಹಾಸ್ಯ ಎಷ್ಟರ ಮಟ್ಟಿಗೆ ಉಳಿದೆಯೋ ನೀವೇ ನಿರ್ಧರಿಸಿ.

"ನೀವು ಈ ಪುಸ್ತಕಗಳನ್ನು ಪೂರ್ಣವಾಗಿ ಸ್ವಾದಿಸಬೇಕಾದರೆ, ನನ್ನ ಹಿಂದಿನ ಎರಡು ಪುಸ್ತಕಗಳನ್ನೂ ಕೊಳ್ಳಬೇಕಾದದ್ದು ಅನಿವಾರ್ಯ. ಈ ಕೆಲಸ ಅತೀ ಸುಲಭ. ನೀವು ಮಾಡಬೇಕಾದದ್ದು ಇಷ್ಟೆ. ಹತ್ತಿರದ ಪುಸ್ತಕದ ಅಂಗಡಿಗೆ ಹೋಗಿ. ಅಲ್ಲಿ ಈ ಸಂಭಾಷಣೆ ಆಗುತ್ತದೆ.

ನೀವು :— ನಮಸ್ಕಾರ ಪುಸ್ತಕದ ಅಂಗಡಿಯವರೇ.

ಪುಸ್ತಕದ ಅಂಗಡಿಯವ :— ನಮಸ್ಕಾರ ಜನ ಸಾಮಾನ್ಯರೇ.

ನೀವು :– ನನಗೆ ವುಡ್ ಹೌಸ್ ಬರೆದಿರುವ 'ದಿ ಇನಿಮಿಟಬಲ್ ಜೀವ್ಸ್' ಮತ್ತು 'ಕ್ಯಾರೀ ಆನ್ ಜೀವ್ಸ್' ಪುಸ್ತಕಗಳು ಬೇಕು.

ಪು.ಅ. :– ಖಂಡಿತವಾಗಿ ಜನ ಸಾಮಾನ್ಯರೇ. ಇಲ್ಲಿ ಐದು ಷಿಲ್ಲಿಂಗ್ ಇಡಿ. ಹುಂ ಇಗೊ ಇಲ್ಲಿವೆ ನಿಮ್ಮ ಪುಸ್ತಕಗಳು.

ನೀವು :– ವಂದನೆಗಳು ಪುಸ್ತಕದ ಅಂಗಡಿಯವರೇ.

ಪು.ಅ. ವಂದನೆಗಳು ಜನ ಸಾಮಾನ್ಯರೇ.

ಅಥವಾ ನೀವು ತಮಿಳಿನವರಾಗಿದ್ದರೆ, ಈ ಕೆಳಗಿನ ಸಂಭಾಷಣೆ ಆಗುವ ಸಾಧ್ಯತೆ ಇದೆ. ನಿಮ್ಮ ಹೆಸರು ತಿರುನಾರಾಯಣ ಐಯ್ಯಂಗಾರ್ ಅಂತ ಊಹಿಸೋಣ.

ತಿರುನಾರಾಯಣ ಐಯ್ಯಂಗಾರ್ :– ವಣಕ್ಕಂ, ಪುಸ್ತಕ ಮಾರಾಟಕಾದರಿಕ್ಕು

ಪು.ಮಾ. :– ವಣಕ್ಕಂ. ನಿಂಬಳಿಕ್ಕು ಎನ್ನಾವೇಣು.

ತಿ. ಐ. :– ನಮುಕ್ಕು ವೋಡ್‌ಹೌಸ್ ಎಯ್ದಿರ್ಕ "ಇನಿಮಿಟಬಳ್ ಜೀವ್ಸ್" ತಿರುಂಬ "ಕ್ಯಾರೀ ಆನ್ ಜೀವ್ಸ್" ವೇಣುಂ.

ಪು.ಮಾ. :– ಖಂಡಿದಮಾ ಕುಡುಕ್ಕರೆ. ಅಂಜಿ ಷಿಲ್ಲಿಂಗ್ ಇಂಗೆ ಕುಡುಂಗೊ. ಪಿನ್ನೆ ಇನ್ನೆನ್ನಾ ವೇಣುಂ ?

ತಿ. ಐ. :– ಇನ್ನೊಣ್ಣೂ ವಾಂಡ. ಪುಸ್ತಕಂ ಮಾತ್ರ ಕುಡುಂಗೋ

ಪು.ಮಾ. :– ಕೊಯಮುತ್ತೂರ್‌ಲೆಯಿಂದ ನಲ್ಲ ಬನಿಯನ್ ವಂದಿರ್‌ಕರ್‌ದು. ರೆಂಡು ವೋಡಲಾಮಾ ?

ತಿ. ಐ. :– ಪೆರಿಯವರೇ ಖಂಡಿಪಾ ವಾಂಡ, ಆಂಡವನ್ ವೇರೆಲೆ ರೆಂಡು ಪುಸ್ತಕಂ ಕುಡುಂಗೋ.

ಪು.ಮಾ. :– ಎಡತ್ತುಕೊಂಗೋ. ವಣಕ್ಕಂ.

ತಿ. ಐ. :– ವಣಕ್ಕಂ.

ಎರಡನೇ ಮಹಾಯುದ್ಧದ ಕಾಲದಲ್ಲಿ ವುಡ್‌ಹೌಸ್‌ನ ಜನಪ್ರಿಯತೆಗೆ ಧಕ್ಕೆ ತಗಲುವಂತಹ ಸಂದರ್ಭ ಒದಗಿ ಬಂತು. ಹಿಟ್ಲರನ ಪಡೆಗಳು ಫ್ರಾನ್ಸ್ ದೇಶವನ್ನು ಆಕ್ರಮಿಸಿಕೊಂಡಾಗ. ವುಡ್‌ಹೌಸ್ ಆಗ ಫ್ರಾನ್ಸ್‌ನಲ್ಲಿ ಇದ್ದುದರಿಂದ. ಜರ್ಮನರ ಬಂಧಿಯಾದ. ಜರ್ಮನರು ತಮ್ಮ ಹಾಸ್ಯಪ್ರಿಯ ಬಂದಿಗೆ ಒಂದು ಷರತ್ತು ಹೇಳಿದರು. ಬರ್ಲಿನ್ ರೇಡಿಯೋದಿಂದ ಹಾಸ್ಯ ಭಾಷಣಗಳನ್ನು ಮಾಡಲು ಒಪ್ಪಿದರೆ. ಜೈಲಿನ ಬದಲು ಮನೆಯಲ್ಲಿ ಇರುವ ಸ್ವಾತಂತ್ರ್ಯ ವುಡ್ ಹೌಸ್ ಅಮಾಯಕನಂತೆ, ಇದಕ್ಕೆ ಒಪ್ಪಿ ಹಲವು ತಿಂಗಳುಗಳ ಕಾಲ ಹಾಸ್ಯ ಭಾಷಣಗಳನ್ನು ಬರ್ಲಿನ್ ರೇಡಿಯೋದಿಂದ ಬಿತ್ತರಿಸಿದ. ಸ್ವಾಭಿಮಾನಿ, ದೇಶ ಪ್ರೇಮಿ ಇಂಗ್ಲೀಷರಿಗೆ ಇದು ಅಕ್ಷಮ್ಯ ಅಪರಾಧದಂತೆ ಕಂಡಿತು. ತಮ್ಮ ಶತ್ರುವಿನೊಡನೆ ಸಹಕರಿಸಿದ ವುಡ್‌ಹೌಸ್‌ನನು ಬ್ರಿಟಿಷರು ಸಂಪೂರ್ಣವಾಗಿ ತಿರಸ್ಕರಿಸಿದರು. ಯುದ್ಧ ಮುಗಿದ ಮೇಲೂ, ಬ್ರಿಟನಿನಲ್ಲಿ ಯಾರೂ ಅವನನ್ನು ಮಾತನಾಡಿಸಲಿಲ್ಲ. ವಿಧಿಯಿಲ್ಲದೇ. ವುಡ್‌ಹೌಸ್ ಅಮೆರಿಕಕ್ಕೆ ವಲಸೆ ಹೋಗಿ ಅಲ್ಲಿನ ನಾಗರೀಕನಾದ. ಕಾಲಕ್ರಮೇಣ ಬ್ರಿಟಿಷರು ವುಡ್‌ಹೌಸ್ ಬಗ್ಗೆ ತಮಗಿದ್ದ ರೋಷವನ್ನು ಮರೆತರು. ಇಂಗ್ಲೆಂಡಿನ ಹಾಸ್ಯ ಪತ್ರಿಕೆಯಾದ 'ಪಂಚ್'ನಲ್ಲಿ ವುಡ್‌ಹೌಸ್‌ನ 'America Today' ಅಂಕಣ ಮುದ್ರಿತವಾಗಲು ಪ್ರಾರಂಭವಾಯಿತು. ವುಡ್‌ಹೌಸ್‌ನ ಹಾಸ್ಯದ ಹೊನಲು ಮತ್ತೆ ಭೋರ್ಗರೆಯಿತು.

ಅನೇಕ ರಾಷ್ಟ್ರಗಳ ಅನೇಕ ಹಾಸ್ಯ ಸಾಹಿತಿಗಳು ವುಡ್‌ಹೌಸ್‌ನಿಂದ ಪ್ರಭಾವಿತರಾಗಿದ್ದಾರೆ. ಹಾಸ್ಯ ಪರಂಪರೆಗೆ ದೇಶ ರಾಷ್ಟ್ರಗಳ ಗಡಿ ಇಲ್ಲ. ಅದೊಂದು ಮೃದುವಾದ ಮನೋಭಾವ. ಸುತ್ತಲಿನ ಪರಿಸರದ ಓರೆ ಕೋರೆಗಳಿಗೆ ನೋವಿನಿಂದ ಸ್ಪಂದಿಸಿ, ನೋವಿನ ಅಂಶವನ್ನು ನುಂಗಿ, ನಗುವನ್ನು ಮಾತ್ರ ಹಂಚುವ ಬಾಧ್ಯತೆ ಹಾಸ್ಯ ಸಾಹಿತಿಗೆ ಇರುತ್ತದೆ. ಈ ಕಾರ್ಯದಲ್ಲಿ ಅನೇಕರಿಗೆ ದಾರಿ ದೀಪವಾದ ವುಡ್‌ಹೌಸ್‌ಗೆ ಜಗತ್ತಿನ ಎಲ್ಲ ಹಾಸ್ಯ ಪ್ರಿಯರ ಪರವಾಗಿ ಪ್ರಣಾಮಗಳು.

21

ಈಶಾನ್ಯ ಪಯಣ

ಡಾ|| ಪ್ರಕಾಶ್

ಟೋಕ್ಯೋ ವಿಮಾನ ನಿಲ್ದಾಣ. ಮೊದಲೇ ಜನ ಎಚ್ಚರಿಕೆ ಕೊಟ್ಟಿದ್ದರು. ಬೆಂಗಳೂರಿನಲ್ಲಿ ಪರಿಚಯ ಇದ್ದ ಜಪಾನೀ ಬಿಸಿನೆಸ್‌ಮನ್ ಸಸಹಾರ ಮೊದಲೇ ಹೇಳಿದ್ದ—ಟೋಕ್ಯೋ ಏರ್‌ಪೋರ್ಟ್ ಬಹಳ ಕನ್‌ಫ್ಯೂಷನ್ನು ಅಂತ. ಪಾಪ ರಾತ್ರಿ ಹತ್ತು ಗಂಟೆ ಆದ್ರೂ ನಿಲ್ದಾಣಕ್ಕೆ ಬಂದಿದ್ದ ಸಸಹಾರ! ಅವನು ಆರು ತಿಂಗಳು ಟೋಕ್ಯೋನಲ್ಲಿ, ಉಳಿದಾರು ತಿಂಗಳು ಬೆಂಗಳೂರಿನಲ್ಲಿ ಬಿಸಿನೆಸ್ ನಡೆಸ್ತಾನೆ. ಯಾವ ದೇಶದ ವರಮಾನ ತೆರಿಗೆಯವರಿಗೆ ಹೆಚ್ಚು ಮೋಸ ಮಾಡ್ತಾನೆ ನನಗಿನ್ನೂ ಅರ್ಥ ವಾಗಿಲ್ಲ! ಈ ಸಸಹಾರ ನನ್ನ ಏರ್‌ಪೋರ್ಟಿನಿಂದ ಕರೆತಂದ. ಅಲ್ಲಿ ಹತ್ರನೇ ಮಾನೋ ರೈಲು ಅದು ಬಹು ವೇಗದಲ್ಲಿ ರಸ್ತೆಗಿಂತ ಎತ್ತರದಲ್ಲಿ ಹೋಗುತ್ತೆ. ಅದರಲ್ಲಿ ಜನ ಭರ್ತಿ ನಿಂತಿದ್ರು. ಅಲ್ಲಿ ರಾತ್ರಿ ಹತ್ತು ಗಂಟೆಗೆ ಇಷ್ಟು ಜನ ಚಟುವಟಿಕೆಯಾಗಿ ಇದಾರಲ್ಲ ಇವರೆಲ್ಲ ಇನ್ನು ಮನೆ ಸೇರಿ ನಿದ್ದೆ ಮಾಡೋದು ಯಾವಾಗ, ಬೆಳಗ್ಗೆ ಬೇಗ ಏಳ ಬೇಕಲ್ಲ ಅಂತ ಯೋಚಿಸಿದೆ. ನನ್ನ ಸೂಟ್‌ಕೇಸುಗಳು ಬಾಗಿಲ ಹತ್ರ ಇಟ್ಟಿದ್ದೆ. ಸರ್ರನೆ ಅವನ್ನ ಕಂಪಾರ್ಟ್‌ಮೆಂಟಿನ ಮಧ್ಯಕ್ಕೆ ಎಳೆದೆ. ಸಸಹಾರ ಏಕೆ ಅಂತ ಹುಬ್ಬೇರಿ ಸಿದ. ಮಾನೋ ರೈಲು, ಭಾರಕ್ಕೆ ವಾಲಿದರೆ ಗತಿ? ಅಂತ ಇಂಗ್ಲಿಷನಲ್ಲಿ ಹೇಳಿದೆ. ಅವನು ಗಹಗಹಿಸಿ ನಕ್ಕು, ಅದನ್ನ ಜಪಾನೀಗೆ ತರ್ಜುಮೆ ಮಾಡಿದ, ಪಕ್ಕದಲ್ಲಿ ನಿಂತಿದ್ದೋರೆಲ್ಲ ನಕ್ಕರು. ನಾನು ತಮಾಷೆಗೆ ಮಾಡಿದೆ ಹಾಗೆ ಅಂತ ಅವರೆಲ್ಲ ತಿಳಿದರು, ಸಧ್ಯ! ಮಾನೋ ರೈಲಿನಿಂದ ಇಳಿದು ಸಬ್‌ವೇನಲ್ಲಿ ಹತ್ತು ನಿಮಿಷ ಪ್ರಯಾಣ. ಆದಾದ ಮೇಲೆ ಟ್ಯಾಕ್ಸೀಲಿ ನಮ್ಮ ಹೋಟಲು ಸೇರಿದೆವು. ಟೋಕ್ಯೋ ನಲ್ಲಿ ಜಾಗ ಕಮ್ಮಿ, ಜನಗಳು ಜಾಸ್ತಿ, ಮೆಜೆಸ್ಟಿಕ್ ತರ ಹಾಗೇ! ನಾನು ಇದ್ದ ಹೋಟೆ ಲಿನ ರೂಂ ನೋಡಿ ನನಗೆ ಕಿಷ್ಕಿಂಧೆಯ ನೆನಪಾಯ್ತು. ಬಾಗಿಲ ಪಕ್ಕದಲ್ಲೇ ಬಾತ್ ರೂಂ, ಮುಂದೆ ಬೆಡ್ಡು, ಸಣ್ಣ ಟೇಬಲ್, ಟಿ.ವಿ. ಎಲ್ಲ ಐದಡಿ X ಹತ್ತಡಿಯಲ್ಲೆ! ಬೆಳಗ್ಗೆ ಎಂಟು ಗಂಟೆಗೆ ಸಸಹಾರ ಬಂದ. ಟೋಕ್ಯೋ ಟೂರ್ ಅಂತ ಇದೆ. ದಿನಾ ಪೂರ್ತಿ ಆಗುತ್ತೆ ಬಾ ಅಂತ ಕರಕೊಂಡು ಹೋದ. ಭರ್ಜರಿ ಬಸ್ಸು ಆದರೆ ಗೈಡಿಗೆ ಇಂಗ್ಲಿಷ್ ಬರುಲ್ಲ. ನಾನು ಇತರ ಜಪಾನೀಯರ ಜತೆ ಪೂರಾ ದಿನ ಸುತ್ತಾಡಿದೆ. ಪಾಪ, ನನ್ನ ಪಕ್ಕದಲ್ಲಿ ಕೂತಿದ್ದ ಜಪಾನಿ, (ಅವನ ಹೆಸರು ಒಕೊರ) ಅವನಿಗೆ ಗೊತ್ತಿದ್ದ ಹರಕು ಇಂಗ್ಲಿಷ್‌ನಲ್ಲಿ ನನಗೆ ಕೆಲವು ವಿಷಯ ತಿಳಿಸಿದ. ಟೋಕ್ಯೋನಲ್ಲಿ

ಹೇಳಬೇಕಾದ್ದು ಅಂದರೆ N.H.K. ಸ್ಟುಡಿಯೋಸ್, ಟಿ.ವಿ. ಸ್ಟುಡಿಯೋ—ಭಾರೀ ಬಿಲ್ಡಿಂಗು ಅದರಲ್ಲಿ ಪ್ರೇಕ್ಷಕರು ನೋಡೋಕ್ಕೆ ಮೇಲಿನ ಅಂತಸ್ತಿಂದ ಏರ್ಪಾಡು ಮಾಡಿದಾರೆ. ಕೆಳಗೆ (ಗಾಜಿನ ತೆರೆಮನೆ!) ಟಿ.ವಿ ಪ್ರೋಗ್ರಾಂಗಳನ್ನ ರೆಕಾರ್ಡ್ ಮಾಡ್ತಾ ಇರ್ತಾರೆ. ನಾನು ನೋಡ್ತಿದ್ದ ಹಾಗೆ ಕೆಳಗೆ ಒಂದು ಕೋರ್ಟ್ ಸೀನ್. ಬಹಳ ಉದ್ರಿಕ್ತ ವಾತಾವರಣ ಲಾಯರೊಬ್ಬ ಜಡ್ಜಿಯ ಹತ್ತಿರ ಕೋಪದಿಂದ ಮಾತಾಡುತ್ತಿದ್ದ. ನಾನು ಮುಂದೇನಾಗುತ್ತೆ ಅಂತ ಕುತೂಹಲದಿಂದ ನೋಡುತ್ತಿದ್ದೆ. ಇದ್ದಕ್ಕಿದ್ದಂತೆ, ಲಾಯರು, ಜಡ್ಜಿ ಇಬ್ಬರೂ ನಗುತ್ತ ಸಿಗರೇಟ್ ಹಚ್ಚಿದರು. ನಾನು ಬೆರಗಾಗಿ ನೋಡಿದೆ. ತಕ್ಷಣ ಅರ್ಥವಾಯಿತು! ಅವರು ಟಿ.ವಿ. ಸೀರಿಯಲ್ ರೆಕಾರ್ಡಿಂಗ್‌ನ ಮಧ್ಯದಲ್ಲಿ ಬ್ರೇಕ್ ಮಾಡಿದ್ದರು।

ಟೋಕ್ಯೋನ ಪ್ರಮುಖ ಅಂಗಡಿ ರಸ್ತೆ ಅಂದರೆ ಗಿಂಜಾ. ಅದರ ಉದ್ದಕ್ಕೂ ನಾನಾ ತರಹದ ಅಂಗಡಿಗಳು! ಕಣ್ಣು ಕೋರೈಸುವ ಹಾಗೆ. ನಂ ದೇಶದ ತರಹ ಅಲ್ಲೂ ಚೌಕಾಸಿ ವ್ಯಾಪಾರ. ಅವನು ತೋರಿಸೋ ಬೆಲೇನೇ ಬೇರೆ. ನಮಗೆ ಕೊನೆಗೆ ದಕ್ಕೋ ಬೆಲೇನೇ ಬೇರೆ! ಆದರೆ ನನ್ನ ಹಾಗೂ ಸುಬ್ಬುವಿನ ಸುದಾಮ–ಬಜೆಟ್‌ನಲ್ಲಿ ಅಂತಹ ಬೆಲೆ ಬಾಳೋ ವಸ್ತು ಯಾವುದೂ ನಿಲುಕಲಿಲ್ಲ. ಬಂದ ದಾರಿಗೆ ಯೆನ್— ಸುಂಕ ಇಲ್ಲ ಅಂತ ಬರಿಗೈಯಲ್ಲಿ ವಾಪಸಾದೆವು.

ಮರಳಿ ಭಾರತಕ್ಕೆ ಸಸಹಾರನಿಗೆ ವಿದಾಯ ಹೇಳಿ ವಿಮಾನ ನಿಲ್ದಾಣ ತಲಪಿದೆವು. ಏರ್‌ಇಂಡಿಯಾ ವಿಭಾಗದಲ್ಲಿ ಭಾರತೀಯರೆಲ್ಲ ಕೂತಿದ್ದರು ಗಟ್ಟಿಯಾಗಿ ಮಾತನಾಡುತ್ತ! ಸೆಕ್ಯೂರಿಟಿ ಚೆಕ್ ಆದಮೇಲೆ ನಮ್ಮನ್ನೆಲ್ಲ ವಿಮಾನದೊಳಕ್ಕೆ ದಬ್ಬಿದರು. ದೇವರ ದಯದಿಂದ ಯಾವ ತೊಂದರೆಯೂ ಇಲ್ಲದೆ (ಶಿಂಟೋ ದೇವರ ದಯೆ!) ಬ್ಯಾಂಗ್‌ಕಾಕ್ ಮಾರ್ಗವಾಗಿ ದೆಹಲಿ ತಲಪಿದೆವು. ಸೆಂಟಾರ್ ಹೊಟೆಲಿನಲ್ಲಿ ಕಾಲಿಟ್ಟ ಕೂಡಲೇ ಭಾರತದಲ್ಲಿ ಬಂದಿಳಿದೀವಿ ಅಂತ ಭದ್ರ ಆಯಿತು. ಅಂದು ರಾತ್ರಿ ಬಕಾಸುರರಂತೆ ಅನ್ನ ತಿಂದು ಮಲಗಿದೆವು. ನನಗೆ ರಾತ್ರಿ ಸುಮೋ ಜಟ್ಟಿಯೊಡನೆ ನಾನು ಜಗಳ ಆಡ್ತಿದ್ದಂತೆ ದುಃಸ್ವಪ್ನ! ಕಿಟಾರನೆ ಕಿರುಚಿಕೊಂಡು ಎದ್ದೆ, ಬೆಂಗಳೂರಿಗೆ ಸೇರುವ ಹೊತ್ತಿಗೆ ಜಪಾನ್ ಅನುಭವ ನೆನಪಿನ ತಿಜೋರಿಗೆ ಸೇರಿತ್ತು.

(ಸದ್ಯ, ಮುಗಿದುದು!)

ವಿಶ್ವಕಪ್ ಹಾಡು ಪಾಡು

–ಆರತಿ

ಪ್ರೇಕ್ಷಕರು

ಆಡಿದನೋ ಸಚಿನ ಅದ್ಭುತದಿಂದಲಿ
ಮೆಕ್‌ಡರ್ಮಿಟ್ ಎಸೆತವ ಸಿಕ್ಸರಿಗಿಕ್ಕುತ
ರನ್‌ಗಳ ಹೊಡೆಯುತ, ನಲಿದಾಡುತ ಓಡುತ
ಆಡಿದನೋ ಸಚಿನ ಅದ್ಭುತದಿಂದಲಿ

ರವಿಶಾಸ್ತ್ರಿ
ಅಜರುದ್ದೀನನಿಗೆ – (ಮೂರು ಓವರುಗಳಲ್ಲಿ ಇಪ್ಪತ್ತು ರನ್‌ಗಳನ್ನು ಕೊಟ್ಟ ನಂತರ)

ಎನಗಾವ ಬಹುಮಾನವನು ಕೊಡುವೆ ನೀನು
ನಿನಗಾಗಿಯನು ದಿನವು ಬಳಲುತಿರುವೆನು ನಾನು
ರನ್‌ಗಳ ನೀಡುತ್ತಾ, ವಿಕೆಟಿನಾಸೆಯ ತೊರೆದು
ನೀಡಿರುವೆ ದಾಂಡಿಗರಿಗೆಲ್ಲ ಸಂತಸವ

ಅಬ್ಬಾಸ್‌ಆಲಿಬೇಗ್
ಅಜರುದ್ದೀನನಿಗೆ– ಇಂದು ಜಯಿಸುವೆ ನಾಳೆ ಜಯಿಸುವೆ

ಎಂಬ ಸೊಕ್ಕನು ಅಡಗಿಸು
ಜಯಿಸಿ ತೋರಿಸು, ಮೌನವನಾರಿಸು
ಅದುವೆ ಆಟದ ರೀತಿಯು

ಅಜರುದ್ದೀನ್
(ಪರಿತಾಪದಿಂದ–
ಡೆಸ್ಪರೇಟ್ ಆಗಿ) ಸುನೀಲನೆ ನೀ ಬಾ ಭಾರತಿ ನಂದನ

ಟೈಗರ್ ಪಟಾಡಿಯೇ ನೀ ಬಾರೋ
ಇಮ್ರಾನ್ ಮಾರ್ಟಿನರ ಇಕ್ಕಳಕೆ ಸಿಕ್ಕಿರುವೆ
ಬನ್ನಿ ನಮ್ಮೆಲ್ಲರ ಬಿಡಿಸ ಬನ್ನಿರೋ

ರಿಚಿ ಬೆನೋ

ಲಾರಾ ವಿಂಡೀರಿಗೆ ಭೂಷಣಂ ದಾಂದಿಗರ್ಗೆ ಸಚಿನ ಮಹಾ ಭಡಿಷಣಂ

ಮಾರ್ಟಿನ್‌ಗೆ ಸಿಕ್ಸರ್ ಭೂಷಣಂ   ಬಾರ್ಡರಿಗೆ ಒಡಾಯಿ ಭೂಷಣಂ

ರನೌಟ್ ಅಜರಗೆ ಭೂಷಣಂ – ಇನ್ಜ಼ಮಾಮುಲಗೆ ರನ್ ರೇಟ್ ಭೂಷಣಂ

ವಾಕಿಗೆ ಕಪ್ಪೇ ಭೂಷಣಂ – ಹರ ಹರಾ ಶ್ರೀ ವಿಶ್ವ ಕಪ್ಪೇಶ್ವರಾ ॥

ನಿರೀಕ್ಷೆ

ಕಪ್ಪಿನಬ್ಬರ ತಣ್ಣಗಾಯಿತು
ಟಿ. ವಿ. ರಂಜಿಸಿ ಆರಿತು
ವಿಶ್ವ ಕಪ್ಪಿನ ಪಂದ್ಯ ಸರಣಿಯು
ಕೊನೆಗು ಮುಗಿದೇ ಹೋಯಿತು.

ಪಂದ್ಯ ಗೆಲುವರೆ ಕಪ್ಪ ತರುವರೆ
ಎಂದು ಕಾದಿಹ ದೇಶಕೆ
ತಂದೇ ತಂದರು ವೀರ ಕುವರರು
ತೆಂಗು ಕಾಯಿನ ಚಿಪ್ಪನು.

ಅಪರಂಜಿ ರಸರಂಜಿ

ಡಾ. ಎಚ್. ಕೆ. ರಂಗನಾಥ್

ಅಪರಂಜಿ ಮನೆಗೆ ಬಂದಾಗ ನಾನಿರಲಿಲ್ಲ. ಸಂಜೆ ಬಂದ ತಕ್ಷಣ ಮಗಳು ನಿತ್ಯದ ವರದಿ ಒಪ್ಪಿಸುವಾಗ ಬಲು ಉತ್ಸಾಹದಿಂದ–'ಅಣ್ಣಾ ಅಪರಂಜಿ–ಈ ಸಲ ಮೈ ಕೈ ತುಂಬಿಕೊಂಡು ನಳನಳಿಸುತ್ತಿದಾಳೆ ನೋಡಿ' ಎಂದು ಪ್ರತಿ ಹಿಡಿದ ಕೈಯನ್ನು ಮುಂದು ಮಾಡಿದಾಗ, ಅದನ್ನು ಕಿತ್ತುಕೊಳ್ಳುವಂತಾಯಿತು. 1992ರ ಏಪ್ರಿಲ್ ಸಂಚಿಕೆ–ಯುಗಾದಿ ವಿಶೇಷಾಂಕ. 146 ಪುಟಗಳು ಅದರಲ್ಲಿ ವಿರಳವಾಗಿ ಒಂದೊಂದೇ ವಾಕ್ಯ ಬರೆದು ಒಟ್ಟು ಪುಟ ತುಂಬಿದ ಜಾಹಿರಾತುಗಳ 28 ಪೇಜ್ ಕಳೆದರೂ ನೂರಾ ಹದಿನೆಂಟು ಪುಟಗಳ ತುಂಬ ಸವಿ ಸವಿಯಾದ ಹೂರಣ. ಕನ್ನಡದ ಹೆಸರಾಂತ ಸಾಹಿತಿಗಳಿಂದ ವಿಡಂಬನೆ, ವಿನೋದ, ಹಾಸ್ಯ, ಕವನ ವ್ಯಂಗ್ಯಗಳ ಕಾರಂಜಿ. ಎಷ್ಟು ತಂಪು–ಅಷ್ಟೇ ಅರ್ಥಪೂರ್ಣ–ಕೈ ಹಿಡಿಯ ತುಂಬ ತುಂಬಿಕೊಳ್ಳುವ ವಿಶೇಷಾಂಕ. ಕೈಯಲ್ಲಿ ಹಿಡಿದು ಪುಟ ತಿರುವಿದೆ.

ಹೊಟ್ಟೆಯಲ್ಲಿ ಕೆಟ್ಟ ಸಂಕಟ ಭುಗಿಲೆದ್ದಿತು. ಹೌದು, ಇಂಥದೊಂದು ಸಂಗ್ರಹ ಯೋಗ್ಯ ಸಂಚಿಕೆಯಲ್ಲಿ ನನ್ನದೊಂದು ಬರಹ ಬಾರಲಿಲ್ಲವಲ್ಲ! ಸಂಪಾದಕ ಶಿವಕುಮಾರ್ ಮೂರು ಮೂರು ಪತ್ರ ಬರೆದು ಲೇಖನ ಕೊಡಿ ಎಂದಿದ್ದರು. ಬರೆಯಲೇಬೇಕು ಎಂಬ ಹಟವನ್ನು ತೊಟ್ಟು ಅದನ್ನೇ ಉಟ್ಟು ಅದನ್ನೇ ಹೊದ್ದು ತಿಂಗಳ ಕಾಲ ನಿದ್ದೆ ಮಾಡಿದ್ದೆ. ಬಸ್ಸು ಮಿಸ್ ಆಗಿತ್ತು.

'ವಿಶೇಷಾಂಕ'ವನ್ನು ಒಂದೇ ಓಟಕ್ಕೆ ಓದಿದೆ. ನನ್ನ ಸಂತೋಷವನ್ನು ತಿಳಿಸಲೇಬೇಕೆಂದು ಮಾರನೆಯ ಮುಂಜಾನೆ ಶಿವಕುಮಾರ್‌ಗೆ ಟೆಲಿಫೋನ್ ಮಾಡಿದೆ. ನನ್ನ ಸಂತೋಷ–ನನಗಾದ ಸಂತಾಪಗಳನ್ನು ಮೇಳವಿಸಿ ಹೇಳಿದೆ. ಬರೆಯಲಾಗಲಿಲ್ಲವಲ್ಲ ಎಂದು ಪರಿತಪಿಸಿ, ಒಂದೆರಡು ತೊಟ್ಟು ಮೊಸಳೆ ಕಣ್ಣೀರು ಬಿಟ್ಟೆ. "ಏಕೆ? ಏನೂ ತಡವಾಗಲಿಲ್ಲ–ಈಗಲೂ ಬರೆಯಬಹುದಲ್ಲ" ಎಂದರು. "ವಿಶೇಷಾಂಕದಲ್ಲಿ ಬರಲು ಇನ್ನು ಸಾಧ್ಯವಿಲ್ಲವಲ್ಲ" ಎಂದೆ. "ವಿಶೇಷಾಂಕವನ್ನೇ ಕುರಿತು ನಿಮ್ಮ ಸಿಹಿ–ಕಹಿಗಳನ್ನು ಬರೆದರೆ, ಯುಗಾದಿಯ ಬೇವು ಬೆಲ್ಲದ ಅನ್ವರ್ಥವಾಗುತ್ತದೆ. ಅಲ್ಲದೆ ವಿಶೇಷಾಂಕದ ಮುಂದಿನ ಸಂಚಿಕೆಯೂ ವಿಶೇಷವೆನಿಸುತ್ತದೆ" ಎಂದು ಉಬ್ಬಿಸಿದರು. ಸಿಕ್ಕಿಕೊಂಡೆ.

ಅಂಥ ಅಪ್ಪನ ಇಂಥ ಮಗ. ಕೇಳಬೇಕೆ ?
ಬಲು ಫಾಟಿ—ಪ್ರಾತು ಮಾತಿಗೆ ನಗೆಯು ನೆಲೆ ॥

ಡಾ. ಶಿವರಾಂ ಸಾವಿನ ಬಾಗಿಲಲ್ಲಿ ನಿಂತಿದ್ದರೂ ನಗೆಯನ್ನು ಮರೆಯಲಿಲ್ಲ. ಅವರ ಅಂತ್ಯಕ್ಕೆ ಕೇವಲ ಒಂದು ವಾರ ಇದ್ದಿರಬಹುದು ಅವರ ಮನೆಗೆ ಹೋಗಿದ್ದೆ ಮಲಗಿದ್ದರು. ಬಳಿಯಲ್ಲಿ ಕುಳಿತು 'ಹೇಗಿದ್ದೀರಿ' ಎಂದೆ. "ಇನ್ನು ಮೇಲೆ ನೀನು ಕೇಳಬೇಕಾದ ಪ್ರಶ್ನೆ ಹೇಗಿದ್ದೀರಿ ಅಲ್ಲ-ಯಾಕಿದ್ದೀರಿ ಅಂತ" ಎಂದು ನುಡಿದು ಕಣ್ಣಲ್ಲಿ ಮಿಂಚಾಡಿಸಿದರು. ಅಂಥ ಅಪ್ಪನ ಇಂಥ ಮಗ, ಪಟ್ಟು ಹಾಕಿ ಹಿಡಿದಾಗ ಮಿಸುಕಾಡಲು ಸಾಧ್ಯವಾಗಲಿಲ್ಲ.

ಟಿ ಸುನಂದಮ್ಮನವರ 'ಕನ್ನಡ ಖನ್ನಡ'ದಿಂದ ಮೊದಲಾಗಿ 'ಪೀಪಿ'ಯವರ 'ಮಧುಚಂದ್ರ'ದ ಪರಿಚಯದವರೆಗೆ 118 ಪುಟಗಳ ಹರಹಿನಲ್ಲಿ ಅಪರಂಜಿಯ ವಿಶೇಷಾಂಕ ನಳನಳಿಸುತ್ತಿದೆ. ವಿನೋದದೊಂದಿಗೇ ಅರ್ಥ ಮತ್ತೆ !–ಡುಂಡಿರಾಜರ ಹನಿಗವನಗಳಂತೆ.

ಎಲ್ಲರಿಗೂ
ತಾಗಿಲ್ಲ ಇನ್ನೂ
ಅಧಿಕಾರದ ಮೇನಿಯಾ
ಅನ್ನೋದಕ್ಕೆ
ಉದಾಹರಣೆ
ಶ್ರೀಮತಿ ಸೋನಿಯಾ

ಅಥವಾ

ಕೌರವರ ತಪ್ಪಿಲ್ಲ
ಪಾಂಚಾಲಿಯಿಂದಲೆ
ಆದದ್ದು ವಸ್ತ್ರಾಪಹಾರ
ಸೀರೆಯನ್ನಾಕೆ
ಉಟ್ಟಿದ್ದು ಏಕೆ ?
ಇರಲಿಲ್ಲವೆ ಚೂಡಿದಾರ ?

ಹೀಗೆಯೆ ಆರತಿ, ತಮ್ಮಾಜಿರಾವ್, ದೊಡ್ಡ ರಂಗೇಗೌಡರ ಕವನಗಳು, ಮನಸ್ಸನ್ನು ಮುಟ್ಟಿ ತಟ್ಟಿ ಹಿಡಿದು ಅಲುಗಾಡಿಸುವ ಲೀಲಾ ಮಿರ್ಲೆಯವರ "ಸವಿಗನ್ನಡ ಪಾರಮಾಲೆ", ಈ ಶತಮಾನದ ಮಹಾನ್ ಹರಟೆಗಾರರಲ್ಲಿ ಒಬ್ಬರಾದ ಆ.ರಾ.ಸೇ.ಯವರು ಕವಿಕುಲ ಲಾಮನ ಕಾಲ, ಲಿಂಗ ಹಾಗೂ ಧರ್ಮಗಳ ಬಗೆಗೆ ನಡೆಯಿಸಿ ಹತ್ತು ಹಲವು ನಿರ್ಣಯಗಳನ್ನು ಮುಟ್ಟಿದ ಸಂಶೋಧನೆ, ವಿಜಯಾ ಸಚ್ಚಿದಾನಂದರ ಚಿರ ಯೌವ

ನವ ವಿಷಯದ ಪ್ರಶ್ನ ಮಾಲಿಕೆ, ಫೋನ್ ಬಾವರೂ ಮಾತನಾಡಲು ಸಾಧ್ಯವಾಗದ ವನಜಮ್ಮನ ನೆರೆಯಾಕೆಯಂತಹ ವ್ಯಂಗ ಚಿತ್ರ–ಹೀಗೆ ಒಂದೆ, ಎರಡೆ ?

'ಇವ್ರು ತಮಿಳು ಮಾತಾಡೋರು ಮೇಡಂ–ಆದರೆ ಘುಂಬ ಖನ್ನಡಾಬಿಮಾನ ಮೇಡಂ. ದೊಡ್ಡ ಕಂತ್ರಾಟರು, ನಮ್ಮ ಏರಿಯಾದಲ್ಲೇ ಹೆಸರು ಮಾಡಿದ ಸ್ರೀಮಂತರು" ಹೀಗೆಂದು ಹೇಳಿದ ಸುನಂದಮ್ಮನವರ ಹರಟೆಯಂತ 'ಕೇಫ'ರ 'ಮಂಕು'ವಾದರೂ ಹರಟೆಯು ಹೊಸ ಮಜಲನ್ನು ಮುಟ್ಟುತ್ತದೆ. ಓದುಗರು ಪತ್ತೇದಾರಿ ಕಾದಂಬರಿ ಬರೆದು ಹೆಸರು ದುಡ್ಡುಗಳನ್ನು ಗಳಿಸಲು ಹಟ ತೊಟ್ಟರೆ 'ಪ್ರಕಾಶ್'ರ ಸೂಚನಾ ಸೂತ್ರಗಳನ್ನು ಹಿಡಿದೇ ಮೇಲು ಮೇಲಕ್ಕೆ ಹತ್ತ ಬೇಕು. ಇನ್ನೂ ಜ್ಯೋತ್ಸ್ನ ಕಾಮತರ ಕುಮಾರ ಕೊಂಡು ತಂದ ಒಳುಕು ವ್ಹೈಯಿನ ಬೈಸಿಕಲ್ಲು: ಅರ್ಧ ಜೀವನವನ್ನು ಕಾರಿನ ಅಡಿಯಲ್ಲಿಯೇ ಕಳೆದು ಮನೆಯಲ್ಲಿ ನಿದ್ದೆಯ ಸಲುವಾಗಿ ಮಂಚದ ಕೆಳಗೇ ಮಲಗುತ್ತಿದ್ದ ಶಿವಸ್ವಾಮಿಯವರ ಮೆಕ್ಯಾನಿಕ್ಕು ರಜೋವೈನಃ" 'ವೈಲೋ ರಕ್ಷತಿ ರಕ್ಷತಃ' ಎಂದು ಕರ್ಮ ಸನ್ಯಾಸ ತಳೆದ ಸರಕಾರಿ ನೌಕರನ ಬಚಾವು ಮಂತ್ರಗಳ ವಾಕ್ಯಾರ್ಥ ಮಾಡಿದ 'ಪೀಪಿ'ಯವರ ವ್ಯಾಖ್ಯೆ, ಡೇಂಜರ್ ಗೂಂಡಾ ಖಂಡೇ ರಾಯನನ್ನು ಖತಂಗೊಳಿಸಿದ ಮ್ಯಾಡ್‌ರಾವ್ ಅರ್ಥಾತ್ ಹುಚ್ಚೂರಾಯರ ಹುಚ್ಚು ಪ್ರಸಂಗಗಳನ್ನು ಕುರಿತಾದ ಕಂಭಂ ಕೃಷ್ಣಮೂರ್ತಿಗಳ ಕಥಾ ಕೀರ್ತನೆ "ಆಯುಧ ಪೂಜೆ ಮಾಡಿಸಿದ ಕಾರಣ ಕಲ್ಲು ಮೌನ ತಳೆಯಬೇಕಾಗಿ ಬಂದ ನಂಜುಂಡ ಶಾಸ್ತ್ರಿಗಳ ನಡುಕ ಕುರಿತು ಸೀ ಆರ್ ಸತ್ಯ ಕಟ್ಟಿದ ಕತೆ; ಕಲ್ಲು, ಮರ, ಟೆಲಿಫೋನ್ ಅಥವಾ ವಿದ್ಯುಚ್ಛಕ್ತಿ ಕಂಬಗಳನ್ನು ಕಡೆಗಣಿಸಿ ಪಕ್ಕದ ಮನೆ ಕಾರಿನ ಟೈರುಗಳನ್ನು ಬಳಸಿಕೊಳ್ಳಲು ಪ್ರಾರಂಭಿಸಿದ್ದ ಶ್ವಾನದ ಸ್ವಾಮಿಗೆ ಗುರುವ ಬರೆದ ಪತ್ರ ;

ಸಂಗೀತದ ಮಹಾ ವಿದ್ವಾಂಸ ಟೈಗರ್ ವರದಾಚಾರ್ಯರು ನಾಮವಿಟ್ಟು, ಟೋಪಿ ತೊಟ್ಟು ಹೊರ ಹೊರಡುವಾಗ ಬಾಗಿಲ ಬಳಿಯ ನಿಲವು ಗನ್ನಡಿಯಲ್ಲಿ ತಮ್ಮ ಅಷ್ಟು ವಕ್ರವಾದ ಮುಖವನ್ನು ನೋಡಿಕೊಂಡು, ತಕ್ಷಣವೇ ತಮ್ಮ ಪ್ರತಿ ಬಿಂಬಕ್ಕೆ ಕೈ ಜೋಡಿಸಿ ಮುಗಿದು "ಆಂಜನೇಯ ಸ್ವಾಮಿನೇ ನಮಃ" ಎಂದು ಉಗ್ಗಡಿಸಿ ಮುಂದಾಗುತ್ತಿದ್ದರಂತೆ. ತಮ್ಮ ಸ್ವಂತ ಮುಖಾರವಿಂದದ ಅವಲೋಕನ ಮಾಡಿದ ಜಿ. ಎನ್. ಜಿ, ಟೈಗರ್‌ಗಿಂತ ಮತ್ತು ಒಂದು ಹೆಜ್ಜೆ ಮುಂದಿಟ್ಟಿದಾರೆ—ವಿಶೇಷಾಂಕದಲ್ಲಿ.

ಹೀಗೆ ಒಂದೆ ಎರಡೆ ? ಅಪರಂಜಿಯ ವಿಶೇಷಾಂಕವನ್ನು ಓದುತ್ತ ಓದುತ್ತ ಭಾವಿಸುತ್ತ ಭಾವಿಸುತ್ತ ಓದುಗನ ಮನಸ್ಸು "ಅಪರಂಜೀ—ನಿನ್ನ ಸಂತತಿ ಸಾವಿರ ವಾಗಲಿ" ಎಂದು ಹರಸಿ ಕೂಗಿ ಹೇಳುವಂತಾಗುತ್ತದೆ.

ಹನಿಗವನಗಳು

ಮ. ಶ್ರೀ. ಮುರಳಿಕೃಷ್ಣ

ದಾರುಣಲೀಲೆ

ಬಂದಾಗ ವರ್ಷಕೊಮ್ಮೆ ಗಾಂಧಿ ಜಯಂತಿ
ಹಾಡಿ ಹೊಗಳುವರು ಮಹಾತ್ಮನ ಕೀರ್ತಿ
ದಿನ ಕಳೆದು ದಿನಕರ ಮೇಲೆದ್ದ ಮೇಲೆ
ಶುರುವಾಗುವುದವರ ದಾರುಣ ಲೀಲೆ

ಅಂತರಂಗ

ಬೆಣ್ಣೆಯಂತೆ
ಕರಗುವ
ಅಂಗನೆಯು
ಅಂತರಂಗ
ಅಂದುಕೊಂಡಿದ್ದೆ
ಅದು
ಅಚಲ ಶಿಲೆ
ಅಂತ ಅರಿವಾದದ್ದು
ಮದುವೆಯಾದ ನಂತರ

ಬಿಜಲಿ

"Be Jolly
Girl"
ಎಂದ ಹುಡುಗನಿಗೆ
ರಪ್ಪನೆ ಕಪಾಳಕ್ಕೆರಡು
ಬಿಗಿದು
ಬೆಡಗಿಯೆಂದಳು
"ಹೌದು ನಾನು
ಬಿಜಲಿ ಗರ್ಲ್
ಹೇಗಿತ್ತು ಶಾಕ್ ?"

ಮಾತಿನ ವರಸೆ

"ಶಿಲಾ ಶಾಸನದ ಬರಹ
ನಮ್ಮ ಪ್ರೇಮ"
ಎನ್ನುತ್ತಿದ್ದ
ಪ್ರಿಯಕರ
ಬೇರೊಬ್ಬಳನ್ನು ಪ್ರೀತಿಸಿದಾಗ
"ನಮ್ಮ ಪ್ರೇಮ
ಮ್ಯಾಜಿಕ್ ಸ್ಲೇಟಿನ
ಬರಹವಾದುದಕ್ಕೆ ಸ್ಸಾರಿ"
ಎಂದು ಕೈ ತೊಳೆದುಕೊಂಡ.

○



ಕೊರವಂಜಿಯಿಂದ ....

ಪಟ್ಟದ ಗೊಂಬೆ

ದಾಶರಥಿ ದೀಕ್ಷಿತ್

"ಅಬ್ಬಬ್ಬ...ಏನು ಭಾರಾಂದ್ರೆ ಈ ಟ್ರಂಕು" ಎಂದು ಬಳುಕಿದಳು ಮೀನಾಕ್ಷಿ ಆ ಹಳದಿ ಥಮಾರ್ ಟ್ರಂಕನ್ನು ಕೋಣೆಯಿಂದ ಹಾಲಿಗೆ ಸಾಗಿಸಬೇಕಾದರೆ, 'ನಿಮ್ಮ ಸಹಾಯವೇ ಬೇಡ–ಗಂಡಸಿಗೇಕೆ ಗೊಂಬೆ ಚಿಂತೆ– ಎಂದು ನನ್ನನ್ನು ದೂರ ಮಾಡಿ ತಾನೇ ಗೊಂಬೆಗಳನ್ನು ಪಟ್ಟಕ್ಕೆ ಕೂರಿಸಲು ಪಾಡ್ಯದ ದಿನ ಪರದಾಡ ತೊಡಗಿದ್ದಳು. ಅರ್ಧಾಂಗಿಯ ಪದ್ದಾಟ ನನ್ನರ್ಧಕ್ಕೂ ಮರುಕ ಕೆರಳಿಸಬೇಕಷ್ಟೇ–ಅಂತೆ ಹೆಗಲ ಮೇಲಿನ ಟೌಲನ್ನು ಟೊಂಕಕ್ಕೆ ಬಿಗಿದು ಪಂಚೆ ಮೇಲಕ್ಕೆ ಕಟ್ಟಿ ಹಳದಿ ಥಮಾರ್ ಟ್ರಂಕಿಗೆ ಕೈಕೊಟ್ಟೆ. ಮೀನಾಕ್ಷಿ ಉಸುರೆತ್ತಲಿಲ್ಲ. ಅದು ಅವಳ ಸ್ವಭಾವ. ತನ್ನ ಕೈಲಾಗದ ಸಮಾಚಾರಕ್ಕೆ ನನ್ನ ಬಲಿ ಮಾಡಿ ಕೆಲಸ ಆದ ಮೇಲೆ ಕೊಂಕು, ಕಂಡು ಹಿಡಿಯುವುದು ಅವಳ ತೌರೂರಿನಿಂದಲೇ ಬಂದ ಸಂಪ್ರದಾಯ.

"ಇಲ್ನೋಡಿ ಆ ಮೇಜು ಮೊದಲಿಟ್ಟು ಕೆಳಗೆ ಹಾರ್ಮೋನಿಯಂ ಪೆಟ್ಟಿಗೆ ಅದರ ಪಕ್ಕದಲ್ಲಿ ಈ ಟ್ರಂಕು— ಕೆಳಗಡೆ ಈ ಚಿಕ್ಕ ಸ್ಟೂಲು ಮೂರು ಮೇಟ್ಟು ಬರೋ ಹಾಗೆ ಇರಲಿ......ಅರೆ ಮೇಜ ಇತ್ತ ಕಡೆ ಸರಿಸಿ—ಸರಿ ಹೋಯ್ತು ಗೋಡೆ ಮೇಲಿರೊ ಫೋಟೋಕ್ಕೆ ಸರಿಯಾಗಿ ಮೇಜು ಸರಿಸಿ—ಹಾ—ಹಾಗೆ...ಇಲ್ನೋಡಿ ಎಡಗೈ ಕೊಂಚ ಈ ಕಡೆ ಬರಲಿ...ಇದೊಂದು ಮೇಜು ಕುಂಟತ್ತೆ. ಕಾಲಿಗೆ ಒಂದು ಕಾಗದಾ ಮಡಿಚಿ ಇಡಿ... ಎಂದು ಒಂದೇ ಸಮ ಟೊಂಕ ಕಟ್ಟಿದ್ದ ನನ್ನ ಗಂಡಾಳಿಗೆ ಕೆಲಸ ಹೇಳುವಂತೆ—ಸೊಂಟದ ಮೇಲೆ ಕೈ ಇಟ್ಟುಕೊಂಡು ಅಡ್ಡಸೆರಗು ಸಿಕ್ಕಿಸಿ ಕೊಂಡು ಠೀವಿಯಿಂದ ಮೇಸ್ತ್ರಿ ಕೆಲಸ ಪ್ರಾರಂಭಿಸಿದ್ದು ನನ್ನ ಗಂಡು ಜೀವಕ್ಕೆ ಕುಟುಕಿದಂತಾಯ್ತು.

"ಚೆನ್ನಾಗಿದೆ ಕಣೆ ನಿನ್ನ ಪ್ರಭಾಮಣಿ ದರ್ಬಾರು...ಹೋಗಲಿ ಪಾಪ ಹೆಣ್ಣೆಂಗ್ಸೂಂತ ಕೈ ಕೊಟ್ಟರೆ_ಪೂರ ಕೈ ನನಗೇ ಕೊಟ್ಟು ನೀನು ಉಸ್ತುವಾರಿಗೆ ನಿಂತ್ಯಾ...

Too many cooks ಆಗಬಾರದಲ್ಲವೆ ?"

"ಹೌದು—ನಾನೊಬ್ಬ ಕುಕ್ಕಿದ್ದರೇ ಸಾಕು ಅಲ್ವೆ... ಎಂದವನೇ ಈ ಅಪಮಾನ ತಡೀಲಾರದೆ ಸೊಂಟದ ಟೌಲು ಬಿಚ್ಚಿ ಗೋಡೆಗೆ ಆತು ಕೂತುಬಿಟ್ಟೆ. ಅವಳೇನಾದರೂ ಪಶ್ಚಾತ್ತಾಪ ಪಟ್ಟಳೆ ? ತಾನೇ ಮೇಜು ಸರಿಸಿ ಹಾರ್ಮೋನಿಯಂ ತೆಗೆದು ಹೊರಗಿಟ್ಟು ಖಾಲಿ ಪೆಟ್ಟಿಗೆ ಹಳದಿ ಟ್ರಂಕಿನ ಪಕ್ಕಕ್ಕಿರಿಸಿ ರೂಮಿಗ ಹೋದಳು. ಆ ಹಾರ್ಮೋನಿಯಂ ಅನ್ನು ಆಳವಾಗಿ ನೋಡಿದೆ ಮೀನಾಕ್ಷಿಯಿಂದ ತಿದಿ ಒತ್ತಿಸಿಕೊಂಡು ಮನೆ ಮೇಲೆ ಕೈ ಆಡಿಸಿಕೊಂಡು ಮೊದಲ ಬಾರಿ ಅವಳನ್ನು ಕಂಡಾಗ ಇದರ ಕೂಗಿಗೆ ಮಾರು ಹೋಗಿ ಮಾಲ ಹಾಕಲು ಸಿದ್ಧನಾದ ನನ್ನ ಈ ಸಂಸಾರ ನೌಕೆಯು ಹುಟ್ಟು ಗೋಲಂತಿದ್ದ ಆ ಹಾರ್ಮೋನಿಯಂ ಹತ್ತಿರ ಸೆಳೆದೆ. ಕಾಲೇಜಲ್ಲಿದ್ದಾಗ ನಾನು ಇದನ್ನು ನುಡಿಸುತ್ತಿದ್ದೆ ತಿದಿ ಒತ್ತಿ ಭಸ ಭಸ ಕೈ ಆಡಿಸಿದೆ—ಕೊಯ್ಯು ಕೊಂಯ್ಯು ಎಂದು ಒತ್ತಿದ ಮನೆ ಅಲ್ಲೇ ಸಿಕ್ಕಿಕೊಂಡು ಶ್ರುತಿ ಹಿಡಿದು ಒಂದೇ ಸಮ ವದರತೊಡಗಿತು ಆ ಪ್ರಾಣಿ. ಅದನ್ನ ಕುಕ್ಕಿ ಬದಿಗೆ ಸರಿಸಿ ಮೀನಾಕ್ಷಿನ್ನ ನೋಡಿದಾಗ ಅವಳಾಗಲೆ ಬೆಳ್ಳಗಿನ ಬಟ್ಟೆ ಮೆಟ್ಟಲ ಮೇಲೆ ಹಾಸುತ್ತಿದ್ದಳು. ಮಾತೇ ಆಡಲಿಲ್ಲ. ಕೋಮಲಾಂಗಿಗೆ ಕೋಪ ಬಂದಿತ್ತು. ಛೆ ! ಹೆಂಗರುಳು—ನವರಾತ್ರಿ ಪಾಡ್ಯ—ಎಷ್ಟು ನೊಂದಳೋ ನನ್ನ ಕೈ ಹಿಡಿದ ತಪ್ಪಿಗೆ ಎಂದು ಮತ್ತೆ ಟೌಲ್ನ ಟೊಂಕಕ್ಕೆ ಬಿಗಿದು ಅಟ್ಟದಿಂದ ಇಳಿಸಿದ ಜಾಕಾಯಿ ಪೆಟ್ಟಿಗೆಯಿಂದ ಗೊಂಬೆಗಳನ್ನು ತೆಗೆದು ಅದಕ್ಕೆ ಸುತ್ತಿದ ಬಟ್ಟೆ ಬಿಚ್ಚತೊಡಗಿದೆ. ತುಂಬು ರೆಪ್ಪೆಯ ಓರೆಗಣ್ಣನ್ನು ಬೀರಿದಳು—ನಾನು ಕಿರು ಮೀಸೆಯಲ್ಲಿ ನಕ್ಕು ನವಿರಾಗಿ ಬೊಂಬೆ ವಿಂಗಡಿಸಿದೆ. ಅಮ್ಮಾ ಅವರ ಕೋಪ ಇಳಿಯುತೊಡಗಿದ್ದು ನನ್ನ ಕೆಲಸಕ್ಕೆ ಹುಮ್ಮಸ್ಸು ಕೊಟ್ಟಿತು. ಒಳಗೇ ನಗುತ್ತಾ—"ಈ ಬಾರಿ ಇನ್ನೊಂದಿಷ್ಟು ಗೊಂಬೆ ತೆಗೀಬೇಕು" ಎಂದು ಪೀಠಿಕೆ ಹಾಕಿದಳು. ಕೆಲವೇ ನಿಮಿಷದ ಕೆಳಗೆ ನಕ್ಕರೆ ಸಾಕು ಎಂದಿದ್ದ ನಾನು ಕಠೋರ ಜೇಬು ಭದ್ರವಾಗಿ ಹಿಡಿದು "ಸಾಕು ಸಾಕು" ಎಂದು ಮಾತ್ರ ಅಂದೆ. ಇನ್ನು ನನ್ನ ನಗಿಸುವುದು ಅವಳ ಸರ್ತಿಯಾಯಿತು. ಮೀನಾಕ್ಷಿ ಬಲೇ ಕಿಲಾಡಿ ಹುಡುಗಿ—ಪರಿಸ್ಥಿತಿಯನ್ನು ಬಹಳ ಕುಶಲತೆಯಿಂದ ಎದುರಿಸುತ್ತಿದ್ದಳು. ಇವಳ ಚಾಕಚಕ್ಯತೆ ರಾಜಕಾರಣ ಪಟುಗಳಿಗಿದ್ದರೆ ಖಂಡಿತ ದೇಶ ಈ ಮಟ್ಟದಲ್ಲಿರುತ್ತಿರಲಿಲ್ಲ. "ಗೊಂಬೆ ತೆಗೆಯೋದು ತೌರು ಮನೆ ಉಡುಗೊರೆ ದುಡ್ಡಲ್ಲಿ ನೀವು ಖರ್ಚು ಮಾಡೋದು ನಾನು ಕಾಣೆನೆ!" ಎಂದು ಪಟ್ಟದ ಗೊಂಬೆ ಮಧ್ಯ ಕೂರಿಸಲು ಕೈಗೆತ್ತಿಕೊಂಡಳು. ಹಳೇ ನೆನಪು ಮನೆ ತುಂಬಿಸಿಕೊಂಡು ಬಂದಾಗಿನ ಮೊದಲ ನವರಾತ್ರಿ ಬೊಂಬೆಗಳಲ್ಲಿ ಅಗ್ರಸ್ಥಾನ ಪಡೆದ ಪಟ್ಟದ ಗೊಂಬೆ ಚಂದನದ ದಂಪತಿಗಳಲ್ಲಿ ಹೆಣ್ಣನ್ನು ನಾನು ಆಕೆಗೂ ಗಂಡನ್ನು ಆಕೆ ನನಗೂ ಹೋಲಿಸಿದ್ದಳು. ನಿಜಕ್ಕೂ ಗಂಡು ಗೊಂಬೆಗೆ ನಾನು

ಹೋಲುತ್ತಿದೆ ಎಂದು ಅವಳ ವಾದ "ಬೇಕಾದರೆ ಕೊನೆಗೆ ಈ ಗೊಂಬೆ ಹಚ್ಚಿಕೊಂಡು ಕನ್ನಡಿ ನೋಡಿಕೊಳ್ಳಿ... ಎಂದಿದ್ದಳು—ನಾನು ಉರಿದು ಬಿದ್ದಿದ್ದೆ. ಇದ್ದದ್ದು ಇದ್ದ ಹಾಗೇ ಹೇಳಿದ್ದಕ್ಕ ಸಿದ್ದಪ್ಪನಿಗೆ ಸಿಡಿಲು ಬಿಡಿದಂತಾಗಿತ್ತು. ಆ ಗಂಡು ಚಂದನದ ಗೊಂಬೆ ಹಿಡಿದೇ ಅವಳು ಆಗ ನಕ್ಕದ್ದು. "ಹೊಸ ನೂಟ್ಯಾತಕ್ಕೆ—ಹಳೇದೇ ನಾಕು" ಎಂದು ಅದನ್ನೇ ಧೂಳು ಕೊಡವಿ—ಅಚ್ಚುಗಟ್ಟಾದ ಮೈಸೂರು ಗುನ್ನಂಪಟ್ಟಿ ರುಮಾಲು ಕಿತ್ತೊಗೆದಳು. ಬಿಳೀ ಕಾಗದದಲ್ಲಿ ಗರ್ಮ್ಮಾಗುಂ ಬಿಳೀ ಟೋಪಿ ಮಾಡಿ ಹಾಕಿದಳು. ನನಗೆ ಮೈ ಉರಿದುಹೋಯ್ತು. ಹೆಣ್ಣು ಗೊಂಬೆಗೆ ಹಳೆ ಉಡುಗೆ ಪೂರ್ತಾ ಬದಲಿಸಿ ಬುಟ್ಟು ಹೂವಿನ ಕಾಶಿ ಪೀತಾಂಬರ ಉಡಿಸಿದಳು." ಯಾವ ಕಾಲಕ್ಕೂ ಒಂದೇ ಕಣೆ ನಿನ್ನ ತಾರತಮ್ಯ— ನಾನು ಹೊಸ ಸೂಟೊಂದಾಗ ಮೂತಿ ಸೊಟ್ಟಮಾಡುವಿ—ನೈಲಾನ್—ಜಾರ್ಜೆಟ್ ಎಂದು ಹಾರಾಡುತ್ತಾ ನೀನು ನಿಗಿನಿಗಿ ನಿಗೀಂತ ಬೆಳಗುತ್ತಲೇ ಇರ್ತಿ—ಹೊಗಲಿ ನನ್ನಾಂತ ಕರೆದ ತಪ್ಪಿಗೆ ಆ ಗೊಂಬೆಗೂ ಹೊಸ ಸೂಟು ಬೇಡವೇನೇ ?.... ಜಾರ್ಜೆಟ್ ಚೋಳಿ ಆ ಹೆಣ್ಣು ಗೊಂಬೆಗೆ ತೊಡಿಸಿ ಸೆರಗು ಸರಿಮಾಡುತ್ತಾ ....ಲಕ್ಷ್ಮಿ ಹಾಗೆ ಹೆಂಗ್ಸು ಲಕ್ಷಣವಾಗಿದ್ದರೆ ಮನೆ ಚೆನ್ನ.....

"ಗಂಡಸರೆಲ್ಲಾ ಬೇವಾರ್ಸಿಗಳು ಕಣೆ—ಈ ಕುಚೋದ್ಯದ ಮಾತಿಗೇ ನನಗೆ ಸಿಟ್ಟುಬರೋದು—ಲಕ್ಷಣವಾಗಿ ಗಂಡು ಗೊಂಬೆಗೂ ಕಚ್ಚೆ ಹಾಕಿ ಪಂಚೆ ವುಡುಸು... ಪಂಚೆ ಎಂದೊಡನೆ ನನ್ನ ಪಂಚೆ ನೆನಪಿಗೆ ಬಂತು—ಸಂಜೆ ತೀಡಿ ಕಚ್ಚೆ ಹಾಕಿ ಉಟ್ಟು ಇವಳಿಗೆ ಹೊಟ್ಟೆ ಉರಿಸಬೇಕೆಂದು ಯೋಚಿಸುತ್ತಿದ್ದಾಗಲೇ ಮೀನಾಕ್ಷಿ ದೊಡ್ಡ ನಗು ನಕ್ಕಳು. ಕಣ್ಣರಳಿಸಿದಾಗ ಕಂಡಿದ್ದು—ಆ ಮೆಟ್ಟಲಮೇಲೆ ಹಾಸಿದ ಬಿಳಿ ಪಂಚೆ ನನ್ನ ಸಂಜೆಯ ಠೇಂಕಾರ ಅಳಿಸಿತು. ಅದಕ್ಕಾಗಲೆ ನಮ್ಮ ಪುಟ್ಟಪಾಪ ಅರಿಶಿನ ಕುಂಕುಮ ಸೇವೆ ನಡೆಸಿತ್ತು. "ನಿನ್ನ ಹಣೆ ಬರಹವೇ ಇಷ್ಟೆಕಣೆ–ಆ ಪಂಚೆ ಯಾತಕ್ಕೆ ಹಾಸಿದ್ದು ನೀನು !.....

"ಏನಂತೀಗ—ಆ ಪಂಚೆ ನಮ್ಮಪ್ಪನ ಮನೇಲಿ ಕೊಟ್ಟಿದ್ದು ತಾನೆ.... ಎಂದು ಕತ್ತಲ್ಲಿನ ಮಾವಿನ ಕಾಯಿ ಸರ ಸರಿಮಾಡಿಕೊಂಡಳು. ನನಗೇನೂ ತೋಚದೆ "ಧೂ ನಾಯಿ.... ಎಂದೆ. "ಹೌದು" ಎಂದಳು ನನ್ನೆಡೆಗೆ ಬೊಟ್ಟುಮಾಡಿ—ಆ ಸಮಯಕ್ಕೆ ಬೊಂಬೆ ಪೆಟ್ಟಿಗೆಯಿಂದ ತೆಗೆದ ನಾಯಿ ನನ್ನ ಕೈಲೇ ಇತ್ತು—ಕುಕ್ಕಿದೆ ಮೇಜಿನ ಮೇಲೆ—ನಮ್ಮ ಪುಟ್ಟಪಾಪ ....ಅಣ್ಣಯ್ಯ ಮಂಗ" ಎಂದಿತು—ಕೋಳಿಗೆ ತೆಗೆಯುತ್ತ. ಇಂಥಾ ಸುಸಮಯ ಎಂದೂ ಮೀನೂ ಕಳಕೊಳ್ಳುವಳಲ್ಲ ....ಪುಟ್ಟಕ್ಕ ನಿನಗೂ ಗೊತ್ತಾಯ್ತೆ...ಅದು" ಎಂದಳು–ನಾನು ಮಾತೇ ಆಡದೆ ಹೋದೆ. ಮಾತು

ಹೊರಟರೆ ತಾನೆ ಆಡಲಿಕ್ಕೆ. ನನ್ನ ಪಾಡಿಗೆ ನಾನು ಬೊಂಬೆಗಳನ್ನು ಒರಸಿ ನನ್ನದೇ ಪಂಚೆ ಮೇಲೆ ಇಡುತ್ತಿದ್ದೆ. ಪಾರ್ಕು—ರಾಮಸೀತೆ ಕಲ್ಯಾಣ ಹಣ್ಣಿನ ಅಂಗಡಿ—ಅರಮನೆ—Lady Gentlemen–ಮೆರವಣಿಗೆ–ಎಲ್ಲಾ ಮಾಮೂಲಂತೆ ಜೋಡಿಸಿದಳು. ನಾನು ಹೇಳಿದೆ. ....ಲೇ ಏನು ಕಾಲ ಬದಲಾಯಿಸ್ತು. ನೀನು ಹೊಸ ಫ್ಯಾಷನ್ ಹುಡುಗಿ ಆದ್ರು ಹಳೇ ಸಂಪ್ರದಾಯ ಬಿಡೋಲ್ಲ—ರೇಷ್ಮೆ ಅಂಗಡಿ—ಕ್ಯೂ ನಿಲ್ಲೋದು–ಗುಡಿಸಲು–ಬಾವಿ ಮುಂದೆ ನೀರು ಸೇದೋದು–ಲಂಚ ಕೊಡೋದು–ಕರೀ ಪೇಟ–ಸುತ್ತಿಗೆ ಕುಡುಗೋಲು–ಜರೀ ಪೇಟೆ–ಕೋಲಾರ–ಚಿತ್ರದುರ್ಗ–ಮುಖ ಮೇಲೆತ್ತಿದ್ದ ಬಡಕಲು ಹಸು–ಇವೆಲ್ಲಾ ಇಡೇ–ಗೊಂಬೆ ಇಡೋದರಲ್ಲೂ ವಾಸ್ತವ ಜೀವನ ಪ್ರತಿಬಿಂಬಿಸು.... ಎಂದು ಚಿಕ್ಕ ಲೆಕ್ಚರ್ರೇ ಕೊಟ್ಟೆ. ಅವಳ ಹೆಣ್ಣು ಹೃದಯ ಕರಗಿ ಕಣ್ಣಲ್ಲಿ ನೀರು ಸುರಿದ–ಬಿಡುತ್ತೆಂದು ತಿಳಿದಿದ್ದೆ. ಆದರೆ ಅವಳೆಂದಳು. ....ಇಲ್ಲೋಡೀಂದ್ರೆ ಅವೆಲ್ಲಾ ದಿನಂಪ್ರತಿ ಅನುಭವಿಸೋ ಸಂಕಟ–ಏನೂ ತಿಳೀದ ಗೊಂಬೆಗಳಿಗೂ ಅಂಟಿಸಬೇಕೇಂದ್ರೆ ?....ನಮಗಂತೂ ನೀರು ಹಾಲು–ಸೋರ ಮನೆ–ಆ ಗೊಂಬೆಗಳಾದರೂ ಅರಮನೆ–ಹಣ್ಣು ಹಂಪಲು–ಮದುವೆ ಚಪ್ಪರ–ಕಾಣಬಾರದೇಂದ್ರೆ !.... ಎಂದು. ಬಾರುಕೋಲಿಂದ ಹೊಡೆದಿದ್ದರೆ ತಡೀತಿದ್ದೆ.....ಈ ಮಾತು ಕೇಳೊಕಾಗಲಿಲ್ಲ. ....ಹ್ಹಿ ಹ್ಹಿ..... ಎಂದು ನಕ್ಕೆ.

ತೆಗೆದ ಗೊಂಬೆನೆಲ್ಲಾ ಜೋಡಿಸಿದಳು. ಅಜ್ಜಿ ಅಡಿಗೆ ಮಾಡಿದ್ದಳು–ಪಾಯಸ ಕೋಸಂಬ್ರಿ–ಚಿತ್ರಾನ್ನ ಬೋಂಡ–ಗಂಡ ಹೆಂಡಿರಿಬ್ಬರೂ ಅಚ್ಚುಗಟ್ಟಾಗಿ ಉಂಡು ಮಲಗಿದೆವು.

ಹಾದಿಯಲ್ಲಿ ಕೇಳಿಸಿದ್ದು —

"ಬೆಂಗಳೂರು ರಸ್ತೆಗಳಲ್ಲಿ ಸ್ಕೂಟರ್ ನಡೆಸ್ತಿದ್ದಾಗ ಹೊಳೀತು
ನೋಡ್ರಿ—ಈ ಬ್ರಾನಿಯನ್ ಮೂವ್‌ಮೆಂಟ್‌ಗೆ, ಮಾಲೆಕ್ಯುಲಾರ್
ಪಾಟ್‌ಹೋಲ್‌ಗಳೇ ಕಾರಣ ಇರಬಹುದು ಅಲ್ವೇ !"

ಅಂದದ್ದೂರು, ಚೆಂದದ್ದೂರು ಸಮ್ಮೂರು

ಶಾಂತಾ ರಘು

ನಮ್ಮ ಸುಬ್ಬತ್ತೆಯ ಮಾತು, ನಡೆ ನುಡಿ, ವ್ಯಕ್ತಿತ್ವಕ್ಕೂ—ಅವರ ರೂಪಕ್ಕೂ ಏನೇನೂ ಸಂಭಂಧವಿಲ್ಲ. ಐದಡಿ ಎತ್ತರ, ಒಳ್ಳೇ ಗುಲಾಬಿ ಬಣ್ಣ, ಪುಟ್ಟ ತಲೆಗಂಟು, ದೊಡ್ಡ ಅಡ್ಡ ಕುಂಕುಮ; ಈ ಪುಟ್ಟ ಸುಬ್ಬತ್ತೆ, ತಮ್ಮ ಆರಡಿ ಎತ್ತರದ ಗಂಡ ಗುಂಡೂರಾಯ್ರನ್ನೂ ದೊಡ್ಡ ಮನೆಯನ್ನೂ, ಮಕ್ಕಳನ್ನೂ Iron handನಿಂದ ರೂಲ್ ಮಾಡ್ತಾಯಿದ್ರು.

ರಿಟೈರ್ಡು ಹೈಕೋರ್ಟು ಜಡ್ಜು ಗುಂಡೂರಾಯ್ರು, ಕೋರ್ಟಿನಲ್ಲಿ ಅನಾಯಾಸವಾಗಿ ಜಡ್ಜ್‌ಮೆಂಟ್ ಕೊಡ್ತಾಯಿದ್ರೂ—home frontನಲ್ಲಿ ಮಾತ್ರ ಹೆಂಡ್ತಿ judgementಗೆ ಶಿರಸಾ ತಲೆ ಬಾಗ್ತಾಯಿದ್ರು. ಸುಬ್ಬತ್ತೆ ಇಲ್ದೆ ಇದ್ರೆ ಆ ಮನೇಲಿ ಒಂದು ಹುಲ್ಲು ಕಡ್ಡೀನೂ ಕದಲ್ತಾ ಇರ್ಲಿಲ್ಲ.

ಒಂಥರಾ ಕಲಸು ಮೇಲೋಗರದ ವ್ಯಕ್ತಿ ನಮ್ಮ ಸುಬ್ಬತ್ತೆ– contardictory character ಅಂತಿಟ್ಕೊಳ್ಳಿ ! ಹಳೇ ಆಚಾರ ವಿಚಾರಗಳಿಗೆಲ್ಲಾ ಗೋಂದಿನಂತೆ ಅಂಟಿಕೊಂಡಿದ್ದ ಅತ್ತೆ—ಸಮಯ ಬಂದ್ರೆ ಎಂಥಾ ಮಾಡರ್ನ್ teenage ಯುವಕರ ಜತೆ ಸಹ ಫಸ್ಟ್‌ಕ್ಲಾಸಾಗಿ ಹೊಂದ್ಕೊಂಡು, ಲೇಟೆಸ್ಟ್ ಪಾಪ್ ಸಿಂಗರ್ ಬಗ್ಗೆ ದಿವಿನಾಗಿ ಲೆಕ್ಚರ್ ಹೊಡೀತಾಯಿದ್ರು !

ಒಂದು ಹಬ್ಬ ಹುಣ್ಣಿಮೆ ಬಿಡಬಾರ್ದು ಅತ್ತೆಗೆ—ಬಲು ಸಿಸ್ತಮ್ಮಾಗಿ ಉಪವಾಸ ವ್ರತ, ಹುಣ್ಣಿಮೆ, ಅಮಾವಾಸೆ, ರಾಹುಕಾಲ, ಗುಳಿಕಾಲ, ಯಮಗಂಡ ವೇಳೆ, ಏಕಾದಶಿ, ದ್ವಾದಶಿ, ಎಲ್ಲ ಕ್ರಮವಾಗಿ ಒಂಚೂರೂ ತಪ್ದೆ ಪಾಲಿಸ್ತಾಯಿದ್ರು.

ಅದೇ ಸಮಯ ನೀಟಾಗಿ ಡ್ರೆಸ್ ಮಾಡ್ಕೊಂಡು ಲೇಡೀಸ್ ಕ್ಲಬ್ಬಿಗೆ ಹೋಗ್ತಾಯಿದ್ರು ಹರಿ ಕಥೆಗೆ ಎಷ್ಟು ಉತ್ಸಾಹದಿಂದ ಹೊರಡ್ತಾಯಿದ್ರೊ, ಅಷ್ಟೇ ಉತ್ಸಾಹದಿಂದ ರಾಜ್‌ಕುಮಾರ್ ಪಿಕ್ಚರಿಗೆ ಸಹ ಹೊರಟು ಬಿಡ್ತಾಯಿದ್ರು !

L.S. ಪಾಸು ಮಾಡಿದ್ದ ಸುಬ್ಬತ್ತೆಯ ಆಂಗ್ಲ ಜ್ಞಾನ ಡೆಕ್ಕನ್ ಹೆರಾಲ್ಡ್‌ನಲ್ಲಿ ಮ್ಯಾಟ್ರಿಮೋನಿಯಲ್ ಕಾಲಂ ಓದೋ ಮಟ್ಟಿಗೆ ವಿಸ್ತರಿಸಿತ್ತು !

"ಅಯ್ಯೋ ! ಅಯ್ಯೋ ! ಕೇಳ್ರೀ ಇದ್ನಾ ! ದೊಡ್ಡ ಬಿಸಿನಸ್ ಮ್ಯಾನ್ ಅಂತೆ ! ದುಡ್ಡು ಕೊಳೀತಾಯಿದ್ಯಂತ ! ಬ್ಯೂಟಿ ಫುಲ್ಲಾಗಿ, ಟಾಲಾಗಿ, ಸ್ಲಿಮ್ಮಾಗಿ, ಫಸ್ಟ್‌ಕ್ಲಾಸಾಗಿ ಅಡಿಗೇ ಬರೋ 25 ವರ್ಷದ ಗ್ರ್ಯಾಜ್ಯುಯೇಟ್ ವಧು ಬೇಕಂತೆ ! ವರನ ವಯಸ್ಸು 55 ! ಇವರಿಗೇನು ಬಂತು ದೊಡ್ರೋಗ ಅಂತೀನಿ ? ಹಲ್ಲು ಬಿದ್ಮೇಲೆ ಹಸೆಮಣೆ ಕೇಳಿತ್ಯೆ ಇವಂಗೆ ? ಇಂಥಾವ್ರನ್ನೆಲ್ಲಾ ಸಾಲಾಗಿ ನಿಲ್ಸಿ ಷೂಟ್ ಮಾಡ್ಬೇಕು !" ಅಂತ ಸುಬ್ಬತ್ತೆ ಆರ್ಮಿ ಜನರಲ್ ಥರಾ ಅಬ್ಬರಿಸಿದ್ರು ಒಂದಿನ.

"ಸುಬ್ಬೀ ! ಆದ್ಯಾಕೆ ಹಾಗೆ ಹಾರಾಡ್ತೀಯೆ ? ಏನೋ ಇಷ್ಟು ವರ್ಷ ಸರಿಯಾದ ಹುಡುಗೀನೇ ಸಿಕ್ಲಿಲ್ಲಾಂತ ಕಾಣತ್ತೆ ಪಾಪ ! ಎಲ್ರೂ ನಂಥರಾ ಲಕ್ಕಿ ಆಗಿರ್‍ತಾರೇನೆ ? ಚಿಕ್ವಯಸ್ಸಿಗೇ ಸಿಕ್ಬಿಟ್ಟೆ ಪುಟ್ಟಗೌರಿ ಥರಾ ನೀನು!" ಅಂತ ಗಂಡ ಗುಂಡೂರಾಯ್ರು ರೋಮ್ಯಾಂಟಿಕ್ಕಾಗಿ ಶುರು ಮಾಡಿದ್ರು.

"ಅಯ್ಯೋ ! ಹಣೇಬರಹ ! ಮೊಮ್ಮಕ್ಳನ್ನ ಮುಂದಿಟ್ಕೊಂಡು ನಿಮಗೇನು ಬಂತೂಂದೆ ? ಪೆಚ್ಚು ಪೆಚ್ಚಾಗಿ ಆಡ್ಬೇಡಿ!" ಅಂತ ಸುಬ್ಬತ್ತೆ ದಭಾಯಿಸಿ ಗಂಡನ ಬಾಯಿ ಮುಚ್ಚಿಸಿದ್ರು.

ಕರ್ನಾಟಕ ಸಂಗೀತ ಅಂದ್ರೆ ಪಂಚಪ್ರಾಣ. ಆದ್ರೂ ಸಮಯಾ ಅಂದ್ರೆ ಇಂಗ್ಲಿಷ್ ಮ್ಯೂಸಿಕ್ ಸಹ ಬಲು ಹುಮ್ಮಸ್ಸಿನಿಂದ ಕೇಳ್ತಾಯಿದ್ರು. ಹೀಗೇ ಎರಡು ವರ್ಷಗಳ ಹಿಂದೆ ಎಲ್ರೂ Grammy Awards ನೋಡ್ತಾ ಕೂತಿದ್ವಿ. ಸಾಲು ಸಾಲಾಗಿ ಪಾಪ್ ಸಿಂಗರ್ಸ್ ಹಾಡಿದ್ದೂ ಹಾಡಿದ್ದೇ ಕುಣಿದಿದ್ದೂ ಕುಣಿದಿದ್ದೇ. ಸುಬ್ಬತ್ತೆ ಕಣ್ಣು ಮಿಟುಕಿಸದೆ ನೋಡಿದ್ರು.

"ಓ ! ಸರಿ ! ತಿಳೀತು ಈ ವರ್ಷದ ಗಂಡಸರ ಫ್ಯಾಷನ್ನು ! ನೋ ಷೇವ್ ! ನೋ ಹೇರ್ ಕಟ್ ! ಪಾಪ, ಅಮೆರಿಕದ ಹಜಾಮರೆಲ್ಲ ಪಾಪರೆದ್ದು ಹೋಗಿರ್ಬೇಕು ಇಷ್ಟೊತ್ತಿಗೆ ! ಯಾಪಾಟಿ ಉದ್ದ ಕೂದ್ಲು ಬೆಳೆಸಿದಾರೆ ನೋಡ್ರೀ ! ಏನೆಣ್ಣೆ ಹಾಕ್ತಾರೋ ಏನೋ ? ಈ ಪದ್ದೀಗೆ (ಮೊಮ್ಮಗಳು) ದಿನಾ ಗೋರಂಟಿ ಎಣ್ಣೆ ತಿಕ್ಕಿ ಮಾಲೀಷ್ ಮಾಡಿದ್ರೂ, ಜಡೆ ಇಲಿಬಾಲದ್ ಥರಾ ಇದೆ !" ಅಂತ ರನ್ನಿಂಗ್ ಕಾಮೆಂಟ್ರಿ ಮಾಡ್ತಾ ಇದ್ರು !

ಅದೇ ಟೈಮಲ್ಲಿ ಸ್ಕ್ರೀನ್ ಮೇಲೆ ಆ ವರ್ಷದ ಬಲು ಪಾಪ್ಯುಲರ್ ಸಿಂಗರ್ Sinead O' Connor ಅನ್ನೋಳು, ಪ್ರತ್ಯಕ್ಷವಾದ್ಲು ಮಹರಾಯಿತಿ. ಒರಗಿದ್ದ

ಅತ್ತೆ ದಿಗ್ಗನೆ ಎದ್ದು ಕೂತರು. ಇಳಿದಿದ್ದ ಕನ್ನಡಕ ಮೇಲೇರಿಸಿದ್ರು, ಕಣ್ಣು ಪಿಳುಕಿಸದೆ, ಉಸಿರು ಬಿಗಿ ಹಿಡಿದು, ನೋಡೇ ನೋಡಿದ್ರು!

ನೋಡ್ಬೇ ಏನ್ಮಾಡ್ತಾರೆ ಹಾಗೆ! ಹಾಡ್ತಾ ಇದ್ದ ಲಲನಾಮಣಿ, ತಲೇನ ನುಣ್ಣಗೆ ಗುಂಡು ಹೊಡೆಸ್ಕೊಂಡಿದ್ಲು!

ಐದು ನಿಮಿಷ ಆದ್ಮೇಲೆ ಅತ್ತೆ ನಿಟ್ಟುಸಿರುಬಿಟ್ರು. ಪಕ್ಕದಲ್ಲಿ 'ಶಿವನೇ' ಅಂತ ಕೂತಿದ್ದ ಗಂಡನನ್ನು ತಿವಿದು "ಏನ್ರೀ; ಚೆನ್ನಾಗಿದೆ ಅಮೇರಿಕಾದ ಲೇಟೆಸ್ಟ್ ಫ್ಯಾಷನ್ನು! ಗಂಡಸ್ರೆಲ್ಲ ಮಾರುದ್ದ ಕೂದಲು ಬೆಳೆಸೋದು! ಹೆಂಗಸ್ರೆಲ್ಲ ಗುಂಡು ಹೊಡೆಸ್ಕೊಳ್ಳೋದು! ಕರ್ಮ! ಕರ್ಮ!" ಅಂತ ತಲೆ ಚಚ್ಚಿಕೊಂಡ್ರು!

ನಮಗೆಲ್ಲಾ ವೀಡಿಯೋ ನೋಡೋದೇ, ಇಲ್ಲಾ, ಸುಬ್ಬತ್ತೆ ವ್ಯಾಖ್ಯಾನ ಕೇಳಿ ನಗೋದೇ, ತಿಳೀಲಿಲ್ಲ. ಸುಬ್ಬತ್ತೆ ಇದ್ರೆ ಸಮಯ ಡಲ್ ಅನ್ನೋ ಬಾಬತ್ತೇ ಇಲ್ಲ!

"ಸುಬ್ಬೀ! ತೀರಾ ಅತೀ ಕಣೇ ನಿಂದು! ಎಲ್ರ ಮೇಲೂ ಕಂಡಾ ಬಟ್ಟೆ ಕಮೆಂಟ್ ಹೊಡೀತೀಯಾ!" ಅಂದ್ರು ರಾಯ್ರು

"ನೀವು ಸುಮ್ನಿರಿ ಸ್ವಲ್ಪ! ದಾಸರೇ ಹೇಳಿಲ್ವೆ?" ಹಂದಿಯಿದ್ದರೆ ಕೇರಿ ಹ್ಯಾಂಗ ಶುದ್ಧಿಯೋ, ಹಾಗೆ, ನಿಂದಕರಿರಬೇಕು "ಅಂತ?"

"ನೀನೂ ಸರಿಯಾಗಿದೀಯಾ. ಮೊದ್ಲು ನಮ್ಮೂರಿನ ಕೇರೀನ ಶುದ್ಧಿ ಮಾಡ್ಕೊಳ್ಳೋಣ! ಆಮೇಲೆ ಅಮೆರಿಕನ್ ಕೇರೀನ ಶುದ್ಧಿ ಮಾಡೋಕೆ ಹೋಗು! ಆಯ್ತು?" ಅಂದ್ರಲ್ಲ ನೋಡ್ಬೇಕು! For once, ಅತ್ತೆ ಥಟ್ಟಂತ ಉತ್ತರ ಹೇಳ್ದೆ ಯೋಚನಾಕ್ರಾಂತ ರಾದ್ರು!

ಹೀಗಿದ್ದ ಸುಬ್ಬತ್ತೆಗೆ ಇದ್ದಕ್ಕಿದ್ದ ಹಾಗೆ ಅಮೆರಿಕಾಗೆ ಹೋಗೋ ಯೋಗ ಒದಗಿ ಬಂತು. ಏನಿಲ್ಲ. ಸ್ಯಾನ್ ಫ್ರಾನ್ಸಿಸ್ಕೊದಲ್ಲಿದ್ದ ಕೊನೇ ಮಗಳು ಲೀಲೂ. ಮದುವೆಯಾಗಿ ಐದು ವರ್ಷಕ್ಕೆ ಈಗ ಗರ್ಭಿಣಿ. ಅಮೆರಿಕದಲ್ಲಿರೊ ಇಂಡಿಯನ್ ಲೇಡೀಸ್ ಯಾರೂ ಹೆರಿಗೆಗೆ ಇಂಡಿಯಾಗೆ ಬರೊಲ್ಲ. ಅನಿವಾರ್ಯವಾಗಿ ಸುಬ್ಬತ್ತೆ ಮಗಳ ಬಾಣಂತನ ಮಾಡಲು ಹೊರಡಬೇಕಾಯ್ತು. ಯಜಮಾನ್ರೂ ಹೊರಟ್ರು. ಸರಿ, ಸುಬ್ಬತ್ತೆ, ಬಸಿರಿ, ಬಾಣಂತಿ, ಮಗೂಗೆ ಬೇಕಾದ, ಕೇಸರಿ, ಕಲ್ಸಕ್ರೆ, ಸೌಭಾಗ್ಯ ಶುಂಠಿ ಲೇಹ್ಯ, ಜಾಕಾಯಿ, ಜಾಪತ್ರೆ, ನಾಂಬ್ರಾಣಿ ಪುಡಿ, ಎಲ್ಲ ರೆಡಿ ಮಾಡ್ಕೊಂಡು ಹೊರಟ್ರು.

ಎಲ್ಲ ಸುಖವಾಗೇ ಆಯ್ತು. ಸ್ಯಾನ್ ಫ್ರಾನ್ಸಿಸ್ಕೋದಲ್ಲಿ ಇಳಿದ ಕೂಡ್ಲೇ—ಇವರ ಲಗ್ಗೇಜು ಕಸ್ಟಮ್ಸ್‌ಗೆ ಹೋಗೋ ತನಕ. ಅತ್ತೆಯ ಗೃಹಚಾರಕ್ಕೆ—ಚಟ್ನಿಪುಡಿ, ತಿಂದಿ ವಗೈರೆ, ಗೊಜ್ಜು, ಉಪ್ಪಿನಕಾಯಿಗಳು, ಇವೆಲ್ಲವನ್ನೂ ತುಂಬಲಾರದೆ ತುಂಬಿಕೊಂಡು, ಹೊಟ್ಟೆ ಉಬ್ಬಿಕೊಂಡಿದ್ದ ದೊಡ್ಡ ಸೂಟ್‌ಕೇಸು, ಅಗ್ರಿಕಲ್ಚರಲ್ ಕಸ್ಟಮ್ಸ್‌ಗೆ ಹೋಗಿಬಿಡ್ತು.

ಅತ್ತೆಯ ಸೂಟ್‌ಕೇಸ್ ತೆಗೆಸಿ, ಪಾಪ, ಹದಿನೈದು ದಿನಗಳಿಂದ ನೀಟಾಗಿ ಪ್ಯಾಕ್ ಮಾಡಿದ್ದ ಪ್ಯಾಕೇಟುಗಳನ್ನೆಲ್ಲ ಸ್ವಲ್ಪವೂ ಕರುಣೆಯಿಲ್ದೆ ತೆಗೆದು, ತೆಗೆದು ಹೊರಗೆ ಹಾಕ್ದ ಕಸ್ಟಂಸ್‌ನವ.

ಅಮೆರಿಕಾದಲ್ಲಿ ಕರಿಬೇವಿನ ಸೊಪ್ಪು ಅಪರೂಪ ಅಂತ ದೊಡ್ಡ ಕಂತೆ ಕರಿಬೇವನ್ನು ಹುಷಾರಾಗಿ ಪಾಲಿಥೀನ್ ಬ್ಯಾಗಲ್ಲಿ ಪ್ಯಾಕ್ ಮಾಡಿದ್ರು ಅತ್ತೆ. ಪಾಪ, ಬಸಿರಿ ಹುಡುಗಿ, ಚಟ್ನಿ, ಗೊಡ್ಡು ಹುಳಿ ಮಾಡ್ಕೊಡೋಣಾಂತ.

"No! no greens!" ಅಂತ ತೆಗೆದು ಅದನ್ನ ಬಿಸಾಕಿದ.

off-seasonನಲ್ಲಿ ಎಲ್ಲೋ ಅಪರೂಪಕ್ಕೆ ಸಿಕ್ತು ಅಂತ ಒಂದು ಡಜನ್ ಮಾವಿನ ಹಣ್ಣು ಬೇರೆ ಇಟ್ಕೊಂಡಿದ್ರು.

"No! no fruits!" ಅಂತ ಅವನ್ನೂ ಬಿಸಾಕಿದ ಭೂಪ. ಈಗಂತೂ ಅತ್ತೆಯ ಕಣ್ಣಿಗೆ ಅವ ಥೇಟ್ ವಿಲ್ಲನ್ ಥರಾನೆ ಕಂಡು ಬಂದ!

"ಇವನ ಮನೆ ಹಾಳಗ! ಇವನ ಕೈ ಸೇದಿ ಹೋಗ! ಕಷ್ಟಪಟ್ಟು ಮುಚ್ಚಟೆ ಮಾಡಿ ತಂದಿದ್ದನ್ನೆಲ್ಲ ಬಿಸಾಕಿಬಿಟ್ನಲ್ರೀ! ಏನು ಇವರಪ್ಪನ ಮನೆ ಗಂಟೆ? ಹಾಳಾದೋನು!" ಅಂತ ಮುಖ ಭಾವ ಸ್ವಲ್ಪವೂ ಬದಲಾಯಿಸ್ದೆ ಶುದ್ಧ ಕನ್ನಡದಲ್ಲಿ ಆ ಅಮೆರಿಕನ್‌ಗೆ ಆಶೀರ್ವಾದ ಮಾಡಿದ್ರು!

"ಸುಮ್ನಿರೇ ಮಹರಾಯಿತೀ! ಎಲ್ಲಾರ ಕನ್ನಡ ಗಿನ್ನಡ ಕಲ್ತುಕೊಂಡಿದ್ದಾನು! ನಾವೀಗ ಪರದೇಶಿಗಳು! ಅಂದ್ರೆ, ಪರದೇಶದಲ್ಲಿದೀವಿ. ಅವರ ರೂಲ್ಸು ಫಾಲೋ ಮಾಡ್ಲೇ ಬೇಕು" ಅಂತ ಗಂಡ ಸಮಾಧಾನ ಮಾಡಿದ್ರು.

ಇಷ್ಟರಲ್ಲಿ ಕಸ್ಟಮ್ಸ್‌ನವ, ಅತ್ತೆ ಸೇಲಂನಿಂದ ಸ್ಪೆಷಲ್ಲಾಗಿ ತಿರಿಸಿ, ಖಮ್ಮಗೆ ಸಾಸಿವೆ ರಸದಲ್ಲಿ ಹಾಕಿಟ್ಟಿದ್ದ ಮಿಡಿಗಾಯಿ ಬಾಟಲನ್ನು ಬಿಸಾಕಿಯಾಗಿತ್ತು "No! no liquids!" ಅಂತ.

ಅತ್ತೆಗೆ ಹೊಟ್ಟೆ ಉರಿದೇ ಹೋಯ್ತು. ಅಚ್ಚ ಕನ್ನಡದಲ್ಲೇ ಅವನಿಗೆ ಹಿಡಿ ಶಾಪ ಹಾಕಿದ್ರು.

ಈಗ ಅವನ ಕೈಯಲ್ಲಿ ಹೋಳಿಗೆಯ ಪ್ಯಾಕೆಟ್ಟಿತ್ತು. ತಿರುಗಿಸಿ, ತಿರುಗಿಸಿ ನೋಡ್ತಾಯಿದ್ದ.

"ಮೇಡಂ! ವಾಟ್ಸ್ ದಿಸ್?" ಅಂದ.

"ಇದು ನಮ್ಮ ಸೌತ್ ಇಂಡಿಯಾದ ಡೆಲಿಕೆಸಿ." ಅಂದ್ರು ಅತ್ತೆ, ಸ್ಟೈಲಾಗಿ.

"Can you plant this? ಒಳಗೆ ಏನಾದ್ರೂ ಬೀಜ ಇದ್ಯೆ?" ಅಂದ. ಅದನ್ನೂ ಬಿಸಾಕೋಕೆ ರೆಡಿಯಾಗಿದ್ದ.

"ಅಯ್ಯೋ ನಿನ್ನ ಬುದ್ಧಿಗಿಷ್ಟು! ಬೃಹಸ್ಪತಿ ಮೊಮ್ಮಗ್ನೇ ನೀನು......... .... No! you can't plant this, because I have cooked it" ಅಂದ್ರು ಅತ್ತೆ ತಾಳ್ಮೆಯಿಂದ.

"ಹೌದೆ? Okay!" ಅಂತ ವಾಪಸ್ಸು ಹಾಕ್ದ. ಅಷ್ಟರಲ್ಲಿ ಅವನ ಕೈಗೆ ಅತ್ತೆಯ ವೆಂಕಟೇಶ ಸುಪ್ರಭಾತದ ಕನ್ನಡ ಪುಸ್ತಕ ಸಿಕ್ಕಿಬಿಡ್ತು.

"ಇದೇನಿದು?" ಅಂದ.

"ನನ್ನ ಪ್ರೇಯರ್ ಪುಸ್ತಕ. ಕನ್ನಡ ಭಾಷೆ" ಅಂದ್ರು ಅತ್ತೆ.

ಆಯಪ್ಪಂಗೆ ಯಾಕೋ ಭಯಂಕರ ಅನುಮಾನ. ಮೂರು ನಾಲ್ಕು ಆಫೀಸರುಗಳನ್ನ ಕರೆದ. ಎಲ್ರೂ ಗುಂಪು ಕಟ್ಕೊಂಡು, ಪುಸ್ತಕಾನ ಇಟ್ಕೊಂಡು ಪಿಸಪಿಸ ಮಾತಾಡಿದ್ರು.

ಇಷ್ಟರಲ್ಲಿ ಗುಂಡೂರಾವ್ ದಂಪತಿಗಳ ಜತೆ ಬಂದಿದ್ದವರಲ್ಲಿ ಅರ್ಧಜನ ಹೊರಟ್ಟು ಹೋಗಿದ್ರು.

"ಇದೇನ್ರೀ ಅನ್ಯಾಯ? ನಮ್ಮನ್ನ ಹೀಗೆ ಹಿಡ್ಕೊಂಡು ಬಿಟ್ನಲ್ಲಾ? ಹಾಳಾದೋನು ಎಲ್ಲ ಬಿಸಾಕ್ಬಿಟ್ಟು ಖಾಲಿ ಸೂಟ್‌ಕೇಸ್ ಆದ್ರೂ ಕೊಟ್ರೆ: ಎತ್ಕೊಂಡು ಮನೇಗಾದ್ರೂ ತೊಲಗಬಹುದು. ಪಾಪ, ಲೀಲೂ, ಅವಳ ಗಂಡ ಹೊರಗೆ ಕಾದೂ, ಕಾದೂ, ಸುಸ್ತಾಗಿರ್ಬೇಕು. ವೆಂಕಟ್ರಮಣಾ! ನೀನೇ ಗತಿ! ಕಾಪಾಡಪ್ಪ!" ಅಂತ ಅತ್ತೆ ಹಲುಬೋಕೇ ಶುರುಮಾಡಿದ್ರು.

ಧೈರ್ಯಗಾತಿಯೇ ನಮ್ಮ ಸುಬ್ಬತ್ತೆ. ಆದ್ರೂ, ಇಪ್ಪತ್ತು ಗಂಟೆಗಳ ಕಾಲ ಒಂದೇ ಸಮನೆ ಪ್ಲೇನಿನಲ್ಲಿ ಕೂತು ಕೂತು, ಕೈ ಕಾಲೆಲ್ಲಾ ಬಟ್ಟೆಯ ಹಾಗೆ ಮೆತ್ತಗಾಗಿ ಹೋಗಿದ್ವು. Jetlag ಬೇರೆ.

ಗುಂಡೂರಾಯ್ರಿಗೋ ನಗು. "ಸುಬ್ಬೀ! ನಂಗ್ಯಾಕೋ ಅನುಮಾನ ಕಣೇ ಇಂಡಿಯಾದಿಂದ ಬಂದಿದೀಯಾ. LTTEನೋ, ULFAನೋ, ಕಾಶ್ಮೀರದ ಉಗ್ರವಾದೀನೋ, ಇಲ್ಲಾ ನಕ್ಸಲೈಟೋ, ಯಾವುದೋ ಗ್ಯಾಂಗಿನೋಳಿರ್ಬೇಕು ನೀನು! Code words ಪುಸ್ತಕ ಇಟ್ಕೊಂಡಿದೀಯಾ ಅಂತ ಅನುಮಾನ ಇವ್ರಿಗೆ!" ಅಂತ ಉರಿಯೋ ಬೆಂಕಿಗೆ ತುಪ್ಪ – ಸಾರಿ! ಜೇಡ! ತುಪ್ಪ ತುಂಬ ತುಟ್ಟಿ – ಪಾಮಾಯಿಲ್ ಸುರಿದ್ರು!

ಅತ್ತೆಯ ಪುಣ್ಯ! ಅವರು ಭಯಂಕರವಾದಿಯಲ್ಲ—ಬಡ ಮುತ್ತೈದೆ ಅಂತ ಕಸ್ಟಂವಮ್ಸ್‌ನವ್ರಿಗೆ ಮನವರಿಕೆ ಆಗಿರ್ಬೇಕು! ಪುಸ್ತಕ ವಾಪಸ್ಸು ಕೊಟ್ಟು—ಹರಡಿದ್ದ ಅಷ್ಟು ಪ್ಯಾಕೆಟ್ಟುಗಳನ್ನೂ ಯದ್ವಾ ತದ್ವಾ ಸೂಟ್‌ಕೇಸಿಗೆ ತುರುಕಿ "you can go, madam" ಅಂದ ಕೂಲಾಗಿ,

"ಥ್ಯಾಂಕ್ಸ್!" ಅಂತ freezing ಧ್ವನೀಲಿ ಹೇಳಿ, ಅತ್ತೆ ಗಂಡನ ಜತೆ ಹೊರಗೆ ಕಾದಿದ್ದ ಮಗಳು, ಅಳಿಯನ ಹತ್ರ ಕಸ್ಟಮ್‌ನವನನ್ನು ದೂರಿದ್ದೂ ದೂರಿದ್ದೇ. ಅವರಿಗೋ ನಗು.

"ಅಮ್ಮಾ! ಕ್ಯಾಲಿಫೋರ್ನಿಯಾದಲ್ಲಿ ಕಸ್ಟಂನವರು ತುಂಬಾ strict. ಇಲ್ಲಿಯ ಮುಖ್ಯ ವ್ಯವಸಾಯ ದ್ರಾಕ್ಷಿ ಬೆಳೆಯೋದೇ. ಎಲ್ಲೆಲ್ಲೂ ಬರೀ ವೈನರೀಸ್. ತುಂಬ ಕಟ್ಟುನಿಟ್ಟಾಗಿ pest control ಮಾಡ್ತಾರೆ. ತೋಟಗಳಿಗೆ ಕೀಟ ತಗಲತ್ತೋ ಅಂತ ಗಾಭರಿ. ಹೊರ ದೇಶಗಳಿಂದ ಕ್ರಿಮಿ, ಕೀಟಗಳೇನಾದ್ರೂ ರವಾನೆಯಾಗಿ ಬಂದ್ಬಿಟ್ರೆ, ದ್ರಾಕ್ಷಿ ತೋಟಗಳು ರೋಗ ತಗಲಿ ನಾಶವಾಗಿ ಬಿಡತ್ವೆ. ಅದಕ್ಕೇ ಇಷ್ಟು ಗಲಾಟೆ ಕಸ್ಟಮ್ಸ್‌ನಲ್ಲಿ. ಹೋದ್ವರ್ಷ ಹೇಗೋ ಏನೋ ಎಡವಟ್ಟಾಗಿ ಎಕರೆಗಟ್ಲೆ ತೋಟ ನಾಶ ಆಗ್ಬಿಡ್ತಂತೆ" ಅಂತ ಲೀಲೂ ವಿವರಿಸಿದ್ಲು.

ಆದ್ರೂ ಅತ್ತೆ ಒಪ್ಲೇ ಇಲ್ಲ. "ಅಂಥಾ ದಿವಿನಾದ ಮಿಡಿಗಾಯಿ ಎಸೆದ್ಬಿಟ್ಟ, ಹಾಳಾದೋನು" ಅಂತ ವಟಗುಟ್ತಾನೇಯಿದ್ರು.

(ಸಶೇಷ)

ಓದುಗರಲ್ಲಿ

ಅಪರಂಜಿ ಯುಗಾದಿ ವಿಶೇಷಾಂಕವನ್ನು ಓದಿ ಅನೇಕರು ಮೆಚ್ಚುಗೆ ಸೂಚಿಸಿ ಪತ್ರಗಳನ್ನು ಬರೆದಿದ್ದಾರೆ. ಇವರೆಲ್ಲರಿಗೂ ವಂದನೆಗಳು. ಸಂಚಿಕೆಯ ಬಗ್ಗೆ ಈ ಮೆಚ್ಚುಗೆ ನಮ್ಮ ಅಂಚೆ ಇಲಾಖೆಗೂ ತಾಗಿರಬೇಕು. ಅನೇಕ ಚಂದಾದಾರರುಗಳಿಗೆ ಈ ವಿಶೇಷ ಸಂಚಿಕೆ ತಲುಪಿಲ್ಲ ಎಂದು ತಿಳಿದು ಬಂದಿದೆ. ಬರೆದು ತಿಳಿಸಿದ ಚಂದಾದಾರರಿಗೆ ಇನ್ನೊಂದು ಪ್ರತಿಯನ್ನು ಈಗಾಗಲೇ ರವಾನಿಸಿದ್ದಾಗಿದೆ. ಇನ್ನೂ ಯಾರಿಗಾದರೂ ಯುಗಾದಿ ಸಂಚಿಕೆ ತಲುಪಿರದಿದ್ದರೆ, ಬರೆದು ತಿಳಿಸಿ. ಮರುಪ್ರತಿ ಕಳಿಸುತ್ತೇವೆ. ಅ.ರಾ.ಸೇ. ಹೇಳುವ ಹಾಗೆ 'ಅಭಿಮಾನ ಏಕ ರೀತಿ ಇರಲಿ'.

ವಂದನೆಗಳೊಂದಿಗೆ,

ಶಿವಕುಮಾರ್

ಸಂಪಾದಕ

ಉದಾರ ಮನಸ್ಸಿನಿಂದ ಉಗಾದಿ ಸಂಚಿಕೆಗೆ ಜಾಹಿರಾತುಗಳನ್ನು ನೀಡಿದ ಈ ಕೆಳಗಿನ ವ್ಯಕ್ತಿ / ಸಂಸ್ಥೆಗಳನ್ನು "ಅಪರಂಜಿ" ಕೃತಜ್ಞತೆಯಿಂದ ನೆನೆಯುತ್ತಾಳೆ.

1 ಮೆಟಲ್ ಪವರ್ (ಇಂಡಿಯಾ) ಪ್ರೈ. ಲಿಮಿಟೆಡ್.

2 ಮೆಷಿನ್ ಎಲಿಮೆಂಟ್ಸ್

3 ಪ್ರಿಸಿಷನ್ ಪ್ರಾಡಕ್ಟ್ಸ್

4 ಪಿ.ಜಿ.ಕೆ. ಅಸೋಸಿಯೇಟ್ಸ್

5 ರೋಲ್‌ಮನ್ ಟ್ರೇಡಿಂಗ್ ಕಂಪನಿ

6 ಜಾಯ್ ಇಂಡಸ್ಟ್ರೀಸ್

7 ಶೇಷಾದ್ರಿ ಅಂಡ್ ಕಂಪನಿ

8 ಸಿ, ಗುರುಸಿದ್ದಪ್ಪ ಅಂಡ್ ಸನ್ಸ್

9 ದಿ ಮೈಸೂರ್ ಕನ್‌ಸ್ಟ್ರಕ್ಷನ್ ಕಂಪನಿ

10 ಆರ್. ವಿ. ಅಪಾರ್ಟ್‌ಮೆಂಟ್ಸ್

11 ಕೇಲಚಂದ್ರ ಮೆಷೀನ್ಸ್

12 ಕೆ. ಎನ್. ರಂಗಸ್ವಾಮಿ

13 ಎನ್. ವೆಂಕೋಬರಾವ್

14 ಯಕ್ಷ ದೇಗುಲ

15 ಫೈನ್ ಕ್ರಾಫ್ಟ್ಸ್

16 ಶ್ರೀಮತಿ ಸುಧಾ ರಾಮಕೃಷ್ಣ

17 ಶ್ರೀ ಎಚ್. ಆರ್. ಶ್ರೀನಿವಾಸ್

18 ಶ್ರೀ ತಲ್ಲಂ ವೆಂಕಟೇಶ್

19 ಎನ್. ಎನ್. ಗಿರಿಮಾಜಿ ಅಂಡ್ ಸನ್ಸ್

20 ಶ್ರೀ ಕೆ. ಟಿ. ನಾರಾಯಣ್ ಮತ್ತು ಶ್ರೀಮತಿ ಪ್ರಫುಲ್ಲ

21 ಸೀಲಿನ್ ಇಂಡಸ್ಟ್ರೀಸ್

22 ಲಯನ್ ಪಿ. ಎಸ್. ಪ್ರೇಮನಾಥ್

23 ಮಾರ್ಬೆಲ್ಲೋ

24 ಎಸ್. ವಿ. ಆರ್. ಏಜನ್ಸೀಸ್

25 ರವಿ ಗ್ರಾಫಿಕ್ಸ್

26 ಕರ್ನಾಟಕ ಇನ್ಸೆಕ್ಟಿಸೈಡ್ಸ್ ಅಂಡ್ ಫಂಗಿಸೈಡ್ಸ್

27 ಮಾಸ್‌ಕಾಟ್ ಆಗ್ರೊ ಕೆಮಿಕಲ್ಸ್

28 ಯು. ಐ. ಪ್ಲಾಸ್ಟ್ ಪ್ರೈ. ಲಿಮಿಟೆಡ್

REGISTERED No. BGW - 180

Printed by V.R NATH for the Publisher M. SHIVAKUMAR, Published and owned by M. SHIVA KUMAR, 36, 6th Main Road, Malleswaram, Bangalore - 560 003 Printed at IMPRESSIONS, 404, Sampige Road, Malleswaram, Bangalore - 560 003. Editor M SHIVA KUMAR